ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

ಕನ್ನಡ ಮಾಸಿಕ

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ: 1 ಏಪ್ರಿಲ್ 2025 ಸಂಚಿಕೆ: 10 ಪುಟಗಳು: 12

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

**ವಿಳಾಸ**

ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



AI generated image: No photo credits required

## ಅಶ್ವತ್ಥ ವೃಕ್ಷದ ಮದುವೆ

ಚಿಕ್ಕವರಿದ್ದಾಗ ಪ್ರಾತಃವಿಧಿಗಳು ಮುಗಿದ ಬಳಿಕ ಹತ್ತಿರದಲ್ಲಿದ್ದ ದೇಗುಲಕ್ಕೆ ಹೋಗುವುದು ರೂಢಿಯಾಗಿತ್ತು. ನಿತ್ಯ ದೇಗುಲದ ಮುಂದಿರುವ ಅಶ್ವತ್ಥ ವೃಕ್ಷದ ದರ್ಶನ. ಏಳು ಸುತ್ತು ಹಾಕಿ ಕೈ ಮುಗಿಯುವುದು ಅಭ್ಯಾಸವಾಗಿತ್ತು. ನಿತ್ಯ ಅನುಸರಿಸುತ್ತಿದ್ದೆವು. ನಮ್ಮಲ್ಲಿ ಏಕಾಗ್ರತೆಯನ್ನು ಮೂಡಿಸಿ ಆಧ್ಯಾತ್ಮಿಕತೆಯನ್ನು ಹೆಚ್ಚಿಸಲು ಅದು ಸಹಕಾರಿಯಾಗಿತ್ತು. ಅಶ್ವತ್ಥ ವೃಕ್ಷದ ಪೂಜೆ ಬೆಳಗ್ಗಿನ ಸಮಯದಲ್ಲೇ ಮಾಡಬೇಕೆನ್ನುವುದು ಹಿಂದಿನಿಂದಲೂ ತಿಳಿದು ಬಂದಿರುವ ವಿಚಾರ.

ಅಶ್ವತ್ಥ ವೃಕ್ಷದ ಕಟ್ಟೆಯೊಳಗೆ ನಾಗದೇವರ ಕಲ್ಲಿನ ಮೂರ್ತಿ ಕಾಣುತ್ತೇವೆ. ವೃಕ್ಷದ ಬೇರಿನಲ್ಲಿ ಬ್ರಹ್ಮ, ಕಾಂಡದಲ್ಲಿ ವಿಷ್ಣು, ಎಲೆಗಳಲ್ಲಿ ಈಶ್ವರ ನೆಲೆಸಿರುವನೆಂಬುವುದು ನಮ್ಮ ನಂಬಿಕೆ.

ಸತ್ಯವಾನ - ಸಾವಿತ್ರಿಯರ ಪೌರಾಣಿಕ ಕಥಾ ಭಾಗವನ್ನು ಓದುವಾಗ ನಮಗೆ ತಿಳಿದು ಬರುವ ವಿಚಾರ ಮರದ ಸನಿಹವೇ ಮಡಿದ ತನ್ನ ಪತಿ ಸತ್ಯವಾನನನ್ನು ಸಾವಿತ್ರೀ ಮತ್ತೆ ಜೀವಂತವಾಗಿ ಪಡೆದದ್ದು ಈ ವೃಕ್ಷದ ಮಡಿಲಿನಲ್ಲೇ. ವಿಶೇಷವಾದ ಶ್ರದ್ಧೆ - ಭಕ್ತಿಯ ಮೂಲಕವೇ ಅದು ಸಾಧ್ಯವಾದದ್ದು. ಶ್ರೀ ಕೃಷ್ಣ ಪರಮಾತ್ಮ ತನ್ನ ಅಂತ್ಯವನ್ನು ಪಡೆದಿರುವ ವೃಕ್ಷವದೆಂದು ಹೇಳುವರು.

ಅಶ್ವತ್ಥ ವೃಕ್ಷ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷವಾದ ಗೌರವವನ್ನು ಪಡೆಯುವ ವೃಕ್ಷ. ಅರಳೀ ವೃಕ್ಷ (peepal tree) ಎಂದೂ ಕರೆಯಲ್ಪಡುವ ಈ ತರುವಲ್ಲಿ ಆಮ್ಲಜನಕ ಅತ್ಯಂತ ಹೆಚ್ಚು ಉತ್ಪತ್ತಿಯಾಗುವುದು. ಅದೆಷ್ಟೋ ಕಾಯಿಲೆಗಳನ್ನು ಹಿಮ್ಮೆಟ್ಟಿಸುವ ಗುಣ ಈ ವೃಕ್ಷಕ್ಕೆ ಇದೆ. ಪವಿತ್ರ ದಾರಗಳನ್ನು ಸುತ್ತಿ ಅಶ್ವತ್ಥ ಮರವನ್ನು ಬೇಡಿಕೊಳ್ಳುವವರು, ವಿಶೇಷ ವ್ರತಗಳನ್ನು ಅಶ್ವತ್ಥ ನಾರಾಯಣನನ್ನು ಒಲಿಸಿಕೊಳ್ಳುವುದಕ್ಕಾಗಿ ನಡೆಸುವವರೂ ಇದ್ದಾರೆ.

ಧನುರ್ಮಾಸದಲ್ಲಿ ಮುಂಜಾನೆಯೇ ಹಣತೆ ದೀಪ ಅಥವಾ ಅರಳೀ ಎಲೆಯಿಂದ ತಯಾರಿಸಿದ ದೀಪಗಳನ್ನು ಇಡುವ ಸಂಪ್ರದಾಯವಿದೆ.




ಆರೋಗ್ಯ ಭಾಗ್ಯ, ಕಲ್ಯಾಣ ಭಾಗ್ಯ, ಸಂತಾನ ಭಾಗ್ಯ, ಸಂಪತ್ತಿನ ಭಾಗ್ಯ ಹೀಗೆ ವೈವಿಧ್ಯಮಯ ಕೋರಿಕೆಗಳನ್ನಿಟ್ಟು ಅಶ್ವತ್ಥ ವೃಕ್ಷವನ್ನು ಬೇಡಿಕೊಳ್ಳುವರು.

ಅಶ್ವತ್ಥ ಮರವನ್ನು ಶನಿವಾರ ದಿವಸವೇ ಪೂಜಿಸಿದರೆ ಹೆಚ್ಚು ಶ್ರೇಷ್ಠ. ಕೋರಿಕೆಗಳು ಈಡೇರುತ್ತವೆ ಎನ್ನುವರು.

ಅಶ್ವತ್ಥ ಮರವನ್ನು ಯಾವುದೇ ಕಾರಣಕ್ಕೂ ಕಡಿಯುವಂತಿಲ್ಲ.

ಗೌತಮ ಬುದ್ಧನಿಗೆ ಇದೇ ವೃಕ್ಷದಡಿ ಜ್ಞಾನೋದಯವಾಯಿತೆನ್ನುವರು. ಹಿಂದಿನ ಅದೆಷ್ಟೋ ಋಷಿವರ್ಯರು ಇದೇ ದೇವತಾ ವೃಕ್ಷದಡಿ ಕುಳಿತು ಪಾಂಡಿತ್ಯ ಪಡೆದದ್ದು. ಆ ವೃಕ್ಷದ ನೆರಳಲ್ಲಿ ಒಂದಷ್ಟು ಹೊತ್ತು ಕಳೆದಾಗ ಸಿಗುವ ಆಹ್ಲಾದಕರ ಅನುಭವ ವರ್ಣನಾತೀತ.

ಅಶ್ವತ್ಥ ವೃಕ್ಷ ಎಲ್ಲೆಂದರಲ್ಲಿ ಬೆಳೆಯುವುದಿಲ್ಲ. ಕೆಲವೊಮ್ಮೆ ಬಾವಿಯ ಒಳ ಆವರಣವನ್ನು ತಬ್ಬಿ ಬೆಳೆಯುವುದಿದೆ. ಅಂತಹ ಸಂದರ್ಭದಲ್ಲಿ ಒಟ್ಟಾರೆ ಕೀಳುವುದೋ, ಎಸೆಯುವುದೋ ಮಾಡುವಂತಿಲ್ಲ. ಧಾರ್ಮಿಕ ಆಚರಣೆಯ ಮೂಲಕ ಬೇರೆಡೆಗೆ ನೆಡುವ ಕ್ರಮ ಅನುಸರಿಸುವರು.

ನಾನು ಈ ಲೇಖನ ಬರೆಯಲು ಕಾರಣ ಇತ್ತೀಚೆಗೆ ಅಶ್ವತ್ಥ ವೃಕ್ಷಕ್ಕೆ ನಡೆದ ಮದುವೆ.

"ಅಕ್ಕ, ಬರೆದು ಕೊಡಿ ಅಶ್ವತ್ಥ ನಾರಾಯಣನ ಭಕ್ತಿ ಗೀತೆಯೊಂದನ್ನು" ಎಂದು ವತ್ಸಲಾ ಕೇಳಿದಾಗ ಆಯಿತೆಂದಿದ್ದೆ. ಅರೆ! ಅಶ್ವತ್ಥ ವೃಕ್ಷದ ಬಗ್ಗೆ ಹೌದು. ನಾರಾಯಣ ಎಂಬುದು ಸೇರಿಸಿದ್ದಾರೆ. ಶಿವನೂ ಇರುವ, ಬ್ರಹ್ಮನೂ ಇರುವ. ಆದರೆ ನಾರಾಯಣನ ಬಗ್ಗೆ? ಸ್ವಲ್ಪ ಗೊಂದಲವಾದರೂ ನನಗೆ ಗೊತ್ತಿರುವಂತೆ ಬರೆದು ಕೊಟ್ಟಿದ್ದೆ.

**ಅಶ್ವತ್ಥ ನಾರಾಯಣ**

ಶಿರ ಬಾಗಿ ನಮಿಸುವೆವು ವರ ನೀಡಿ ಭಕ್ತರನು
ಸಂತೈಸು ಅಶ್ವತ್ಥ ನಾರಾಯಣ |
ಪರಿಹರಿಸಿ ಸಂಕಟವ ಹರುಷದೋಕುಳಿ ಹರಿಸು
ಪೂಜಿಪೆವು ಅಶ್ವತ್ಥ ನಾರಾಯಣ ||

ಏಳು ಸುತ್ತನು ಬಂದು ಸಾಲು ದೀಪವ ಹಚ್ಚಿ
ನಿಂದಿರಲು ಮನದಲ್ಲಿ ಸಂತೃಪ್ತಿಯು |
ಪತಿಯ ಪ್ರಾಣವನುಳಿಸಿ ಸಾವಿತ್ರಿಯಾ ಗೆಲುವು
ಹಿಂದಿರುವ ಗಾಥೆಯೋ ಅವ್ಯಕ್ತವು ||

ಜ್ಞಾನದಲಿ ಹೆಚ್ಚಳವು ಸಂತಾನ ಭಾಗ್ಯವು
ಆರೋಗ್ಯ ಲಗ್ನವೂ ದೇವನೊಲಿಯೆ |
ಆಮ್ಲಜನಕವ ಹೊತ್ತ ವೃಕ್ಷಗಳ ರಾಜನಿಗೆ
ಮನಸೋತ ಭಗವಂತ ಅವನಲ್ಲವೇ ||

ಹರಿ ಹರರು ಮಾತ್ರವೇ ಬ್ರಹ್ಮನೂ ನೆಲೆಸಿರುವ
ಅಶ್ವತ್ಥ ವೃಕ್ಷವೇ ಶರಣು ಶರಣು |
ದೇಗುಲದ ಬಳಿಯಲ್ಲಿ ನೆಲೆಯ ಬಯಸುವ ವೃಕ್ಷ
ವಂದಿಸುವೆ ಅಶ್ವತ್ಥ ನಾರಾಯಣ ||

ಆಶ್ರಯವ ಪಡೆದಂಥ ಹಕ್ಕಿಗಳ ಚಿಲಿಪಿಲಿಯು
ಹಾಡಿ ಹೊಗಳುತಲಿಹುದು ನಾರಾಯಣ |
ನಿನ್ನ ಕೃಪೆಯಲಿ ನಾವು ನಗುನಗುತ ಬಾಳುವೆವು
ಶರಣೆಂದೆ ಅಶ್ವತ್ಥ ನಾರಾಯಣ ||

ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜನರ ಸಮ್ಮುಖದಲ್ಲಿ ಸುಶ್ರಾವ್ಯವಾಗಿ ಹಾಡಿದ್ದರು ವತ್ಸಲಾದ್ವಯರು. ಖುಷಿಯಾಯಿತು. ಕಳಿಸಿದ್ದ ಚಿತ್ರದಲ್ಲಿ ಸಿಂಗರಿಸಲ್ಪಟ್ಟ ವರವಧೂ. ಅಪರೂಪಕ್ಕೊಮ್ಮೆ ನಡೆಯುವ ಮದುವೆ.

ಇಲ್ಲಿ ವರ ಅಶ್ವತ್ಥ - ವಧೂ ಕಹಿ ಬೇವು. ಎರಡೂ ವೃಕ್ಷಗಳು ಆರೋಗ್ಯದ ವಿಷಯದಲ್ಲಿ ಬಹಳ ಪ್ರಮುಖವಾಗಿದೆ. ಔಷಧೀಯ ಗುಣಗಳು ಒಂದೇ ಎರಡೇ? ಅದ್ಭುತ.

ಒಂದು ಸಂಸ್ಕಾರವುಳ್ಳ ಕುಟುಂಬದಲ್ಲಿ ಯಾವುದೇ ಕ್ರಮಕ್ಕೆ ಭಂಗ ಬರದಂತೆ ನಡೆಯುವಂತಹ ಮದುವೆ.

ವಧೂವಿನ ಕಡೆಯವರು, ವರನ ಕಡೆಯುವರು.

ಅರಿಶಿನ ಶಾಸ್ತ್ರ, ಬಳೆಯ ಶಾಸ್ತ್ರ, ನಾಂದಿ ಶಾಸ್ತ್ರ, ಹೋಮ, ವಾದ್ಯಗೋಷ್ಠಿ, ಇತ್ಯಾದಿ ಇತ್ಯಾದಿ. ಜರತಾರಿ ಸೀರೆ, ಶಾಸ್ತ್ರ ಸಂಪ್ರದಾಯ ಯಾವುದೂ ತಪ್ಪಿಸಿಲ್ಲ. ಒಂದು ಬ್ರಾಹ್ಮಣ ಕುಟುಂಬದಲ್ಲಿ ನಡೆಯುವ ಪ್ರತಿಯೊಂದು ಆಚರಣೆ ಇದೆ. ನಮ್ಮ ಆಚರಣೆಯೂ ಬ್ರಾಹ್ಮಣರ ಆಚರಣೆಯೂ ಒಂದೇ ತಾನೇ.

ಒಂದು ಸಾವಿರ ಎಲೆ ಅಶ್ವತ್ಥ ವೃಕ್ಷದಲ್ಲಿ ಹುಟ್ಟಿಕೊಂಡಾಗಲೇ ಮದುವೆ ಮಾಡಬೇಕೆಂಬ ನಂಬಿಕೆಯಿದ್ದರೂ ಅವರವರ ಅನುಕೂಲಕ್ಕೆ ತಕ್ಕಂತೆ ಈ ಆಚರಣೆಯನ್ನು ನಡೆಸುವರು.
ಈ ಮದುವೆಯಿಂದ ಸರ್ವರಿಗೂ ಶ್ರೇಯಸ್ಸು ನಿಶ್ಚಿತ. ಕರಾವಳಿಯಲ್ಲಿ ಹೆಚ್ಚಾಗಿ ಈ ಸಂಪ್ರದಾಯ ಕಂಡು ಬರುವುದು.

ಅಶ್ವತ್ಥ ನಾರಾಯಣನ ಮದುವೆ ಹೇಗೆ ಎಂದರೆ ಇಲ್ಲಿ ನಡೆಯುವುದು ವಿಷ್ಣು ಮತ್ತು ಲಕ್ಷ್ಮಿಯ ಮದುವೆ.

ಅಶ್ವತ್ಥ ನಾರಾಯಣ. ಕಹಿ ಬೇವಿನ ವೃಕ್ಷ ಲಕ್ಷ್ಮೀ. ವಧೂವರರ ಶೃಂಗಾರ ಅದ್ಭುತ.
ಮದುವೆಯ ಊಟ ಅದ್ದೂರಿ.

ಅಂದ ಹಾಗೆ ಅಶ್ವತ್ಥ ವೃಕ್ಷಕ್ಕೆ ಉಪನಯನವನ್ನೂ ಮಾಡುವರು. ಒಟ್ಟಾರೆ ಸುರರು ನರರಿಗಿಂತ ಭಿನ್ನವಲ್ಲ ಮದುವೆಯ ಕ್ರಮ.

ಶಿರ ಬಾಗಿ ನಮಿಸುವೆ ನಾರಾಯಣ - ಅಶ್ವತ್ಥ ನಾರಾಯಣ.



ಶೋಭಾ ಹರಿಪ್ರಸಾದ
ಶೆಟ್ಟಿಗಾರ
ಉಡುಪಿ

# "ಯುಲಿಸೆಸ್" ನ ನಿವೃತ್ತಿ ಜೀವನ




ವೃತ್ತಿನಿರತ ಬದುಕಿನಿಂದ ನಿವೃತ್ತಿ ಪಡೆಯುವುದೆಂದರೇನು ಮತ್ತು ಅದನ್ನು ಯಾವ ವಯಸ್ಸಿನಲ್ಲಿ ತೆಗೆದುಕೊಳ್ಳಬಹುದು? ಎನ್ನುವ ಪ್ರಶ್ನೆಗಳಿಗೆ ಸಾಮಾನ್ಯವಾಗಿ ನಮಗೆ ಸಿಗುವ ಉತ್ತರವೆಂದರೆ, ಮನುಷ್ಯಲೋಕದ ಪ್ರಚಲಿತ ಸಿದ್ಧ ಮಾದರಿಯ ಪ್ರಾಪಂಚಿಕ ಜವಾಬ್ದಾರಿಗಳಾದ ಮನೆ ಕಟ್ಟುವುದು, ಸಾಂಸಾರಿಕ ಪಾತ್ರ ನಿರ್ವಹಣೆ, ಮಕ್ಕಳ ಉಜ್ವಲ ಭವಿಷ್ಯದ ಖಾತ್ರಿ ಇತ್ಯಾದಿಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಅವುಗಳನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಿದ ನಂತರ, ಅವರಿಂದ ಪ್ರತಿಯಾಗಿ ಮರು ಸೇವೆ ಮಾಡಿಸಿಕೊಳ್ಳುತ್ತಾ, ಜೀವನದ ಅಂತಿಮ ದಿನಗಳ ಕ್ಷಣಗಣನೆಮಾಡುವುದನ್ನು ನಿವೃತ್ತಿ ಜೀವನವೆನ್ನಬಹುದು. ನಮ್ಮ ಪುರಾಣಗಳಲ್ಲಿ ಕಂಡುಬರುವಂತೆ, ಹಿಂದೆ ಪ್ರಾಪಂಚಿಕ ಜವಾಬ್ದಾರಿಗಳಿಂದ ನಿವೃತ್ತಿ ಹೊಂದಿದವರು ತಮ್ಮ ಅಂತಿಮ ದಿನಗಳನ್ನು ಕಳೆಯಲು ಕಾಡಿನತ್ತ ಮುಖ ಮಾಡಿದರೆ (ವಾನಪ್ರಸ್ಥ), ವರ್ತಮಾನ ಲೋಕದಲ್ಲಿ ನಿವೃತ್ತರು ವೃದ್ಧಾಶ್ರಮಗಳತ್ತ ತೆರಳುವುದನ್ನು ಅಥವಾ ಒಂದು ವೇಳೆ ಮನೆಯವರೊಂದಿಗೆ ದಿನಕಳೆದರೂ ಸದಾ ಅಸಂತುಷ್ಟರಾಗಿರುವುದನ್ನು ನಾವು ಗಮನಿಸಬಹುದು. ಆದರೆ, ಇದಕ್ಕೆ ತದ್ವಿರುದ್ಧವಾಗಿ, ನಿಸರ್ಗದಲ್ಲಿರುವ ಅನ್ಯ ಜೀವಿಗಳಲ್ಲಿ ನಿವೃತ್ತಿಯ ಪರಿಕಲ್ಪನೆಯನ್ನು ನಾವು ಕಾಣುವುದಿಲ್ಲ. ಅವುಗಳು ತಮ್ಮ ಬದುಕಿನ ಅಂತಿಮ ಕ್ಷಣದವರೆಗೆ ದೈನಂದಿನ ಜೀವನ ನಿರ್ವಹಣೆಗೆ ಹೋರಾಡುತ್ತಲೇ ಇರುತ್ತವೆ. ಹಾಗಾಗಿ, ನಿವೃತ್ತಿಯನ್ನು ಮನುಷ್ಯ ಲೋಕ ಮಾಡಿಕೊಂಡಿರುವ ಒಂದು ವಿಶೇಷ ಸವಲತ್ತು ಅಥವಾ ಅನುಕೂಲಕರ ವ್ಯವಸ್ಥೆಯೆಂದು ಪರಿಗಣಿಸಬಹುದು. ಈ ಹಿನ್ನೆಲೆಯಲ್ಲಿ, ವರ್ತಮಾನ ಕಾಲದಲ್ಲಿ ಮನುಷ್ಯನಿಗೆ ನಿವೃತ್ತಿ ಬೇಕೇ, ಬೇಡವೇ ಎನ್ನುವ ಜಿಜ್ಞಾಸೆಗೆ, ಆಂಗ್ಲ ಕವಿ ಲಾರ್ಡ್ ಆಲ್ಫ್ರೆಡ್ ಟೆನ್ನಿಸನ್ 1833ರಲ್ಲಿ ಬರೆದ ಕವನ "ಯುಲಿಸೆಸ್" ನ ಮರು ಓದು ಒಂದು ಸ್ಫೂರ್ತಿದಾಯಕ ನಿವೃತ್ತಿ ಜೀವನದ ವ್ಯಾಖ್ಯಾನ ಕೊಡುವುದರೊಂದಿಗೆ ಬಹಳ ಪ್ರಸ್ತುತವೆನಿಸುತ್ತದೆ.

ಟೆನ್ನಿಸನ್, ತನ್ನ 20ರ ಹರೆಯದಲ್ಲಿ, ಉಜ್ವಲ ಭವಿಷ್ಯದ ಭರವಸೆ ಹುಟ್ಟಿಸಿದ್ದ ಕಾಲೇಜು ಸ್ನೇಹಿತ ಆರ್ಥರ್ ಹೆನ್ರಿ ಹಾಲಮ್ ಆಕಸ್ಮಿಕ ನಿಧನ ಹೊಂದಿದಾಗ ತೀವ್ರ ಮಾನಸಿಕ ಖಿನ್ನತೆಗೆ ಒಳಗಾದ. ಜೊತೆಗೆ, ಆ ಸಮಯದಲ್ಲಿಯೇ ತಂದೆಯ ಸಾವಿನಿಂದಾಗಿ, ತನ್ನ ದೊಡ್ಡ ಮತ್ತು ಅಸ್ವಸ್ಥ ಸಂಸಾರದ ಜವಾಬ್ದಾರಿಯನ್ನೂ ನಿರ್ವಹಿಸಬೇಕಿತ್ತು. ಈ ಒತ್ತಡಗಳ ನಡುವೆ ತನ್ನ ಸಾಹಿತ್ಯಾಸಕ್ತಿ ಮತ್ತು ಬರವಣಿಗೆಯನ್ನು ಹಾಗೆಯೇ ಉಳಿಸಿಕೊಳ್ಳಬೇಕಾಗಿತ್ತು. ಈ ಸಂದರ್ಭದಲ್ಲಿ ಬರೆದ "ಯುಲಿಸೆಸ್"ನಲ್ಲಿ ನಿರೂಪಕನ ಸಾಂಸಾರಿಕ ಜವಾಬ್ದಾರಿಗಳ ನಿರ್ವಹಣೆಯ ಒತ್ತಡ ಮತ್ತು ತನ್ನ ಉಳಿದ ಜೀವಿತಾವಧಿಯಲ್ಲಿ ಸಾಧಿಸಬೇಕೆಂದುಕೊಂಡಿರುವ ವೈಯಕ್ತಿಕ ಮೈಲಿಗಲ್ಲುಗಳ ನಡುವಿನ ಆಯ್ಕೆಯ ದ್ವಂದ್ವಗಳು ಹಾಗು ಇವುಗಳ ನಡುವೆ ಅವನ ಅಂತಿಮ ದೃಢನಿರ್ಧಾರವನ್ನು ನಾವು ಗುರುತಿಸಬಹುದು.

ಯುಲಿಸೆಸ್, ಗ್ರೀಕ್ ಕವಿ ಹೋಮರ್ ರಚಿಸಿದ ಮಹಾಕಾವ್ಯ, "ಒಡಿಸ್ಸಿ"ಯ ನಾಯಕ. ಇದರಲ್ಲಿ, ಹತ್ತು ವರ್ಷಗಳ ಟ್ರೋಜನ್ ಯುದ್ಧ ಮತ್ತು ಮುಂದಿನ ಹತ್ತು ವರ್ಷಗಳ ಕಾಲ ಒಡಿಸ್ಸಿ ತನ್ನೂರು ಇಥಾಕಾ ದ್ವೀಪಕ್ಕೆ ಮರುಪ್ರಯಾಣ ಮಾಡುವ ಕಥಾನಕವಿದೆ. ಹೀಗೆ, ಇಪ್ಪತ್ತು ವರ್ಷಗಳ ಕಾಲ ನಿರಂತರ ಚಟುವಟಿಕೆಯುಕ್ತ ಸಾಹಸಮಯ ಬದುಕನ್ನು ಅನುಭವಿಸಿದ ಒಡಿಸ್ಸಿ, ಸವಾಲುಗಳಿಲ್ಲದ ನಿವೃತ್ತಿ ಜೀವನವನ್ನು ಇಥಾಕಾದಲ್ಲಿ ಹೇಗೆ ಕಳೆದ, ಅವನೊಳಗೆ ವೃತ್ತಿ ಜೀವನ ಮತ್ತು ನಿವೃತ್ತಿಗಳ ನಡುವೆ ನಡೆದ ಮಾನಸಿಕ ಸಂಘರ್ಷಗಳೇನು, ಎನ್ನುವ ಕುತೂಹಲಕ್ಕೆ, ಕವಿ ಟೆನ್ನಿಸನ್ ಇಲ್ಲಿ ಉತ್ತರ ಕಂಡುಹಿಡಿಯುವ ಪ್ರಯತ್ನ ಮಾಡಿದ್ದಾನೆ.

ಯುಲಿಸೆಸ್ ಇಲ್ಲಿ ಹೇಳುತ್ತಾನೆ- 'ಈ ಜಡಭರಿತ ಮತ್ತು ಹೊಂದಾಣಿಕೆಯ ಬದುಕಿನಲ್ಲಿ ಏನೂ ಸ್ವಾರಸ್ಯವಿಲ್ಲ. ಈ ಏಕತಾನದ ದಿನಚರಿಯಲ್ಲಿ ಅರ್ಥವಿಲ್ಲ, ನಾನು ಮರುಪ್ರಯಾಣ ಕೈಗೊಳ್ಳಲೇಬೇಕು. ಜೀವನವನ್ನು ಕೊನೆಯ ಕ್ಷಣದವರೆಗೆ ಆಸ್ವಾದಿಸಬೇಕು. ನಾನೀಗಾಗಲೇ, ಪ್ರಪಂಚದ ಸಾಕಷ್ಟು ನಗರಗಳು ಮತ್ತು ಪ್ರದೇಶಗಳನ್ನು ಸುತ್ತಾಡಿ ವೈವಿಧ್ಯಮಯ ಜನರು, ಹವಾಮಾನಗಳು, ನಡವಳಿಕೆಗಳು, ಇತ್ಯಾದಿಗಳನ್ನು ನೋಡಿದ್ದೇನೆ. ಆದರೆ, ಇನ್ನಷ್ಟು ನೋಡಬೇಕೆನಿಸುತ್ತಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಸಮಾನ ಮನಸ್ಕರೊಂದಿಗೆ ನಾನು ಅನುಭವಿಸಿದ ಸಂತಸ ಮತ್ತು ಸವಾಲುಗಳ ದಿನಗಳನ್ನು ಮರಳಿ ಪಡೆಯಬೇಕಾಗಿದೆ. ನನಗೀಗ ಸ್ವಲ್ಪವೇ ಸಮಯ ಉಳಿದಿದೆ. ಹಾಗಾಗಿ, ಚಿರನಿದ್ರೆಗಿಂತ ಮೊದಲಿರುವ ಪ್ರತಿ ಗಂಟೆಯೂ ಬಹಳ ಅಮೂಲ್ಯವಾದುದು. ನನ್ನ ಅನುಪಸ್ಥಿತಿಯಲ್ಲಿ ಈ ರಾಜ್ಯಭಾರವನ್ನು ನನ್ನ ಮಗ ಬಹಳ ಸಮರ್ಥವಾಗಿ ನಿರ್ವಹಿಸುತ್ತಾನೆ ಎನ್ನುವ ವಿಶ್ವಾಸ ನನಗಿದೆ. ಹಾಗಾಗಿ, ನಾನು ನಿರಾಳವಾಗಿ ಪುನಃ ಪ್ರಯಾಣಕ್ಕೆ ಸಿದ್ಧತೆ ನಡೆಸಬಹುದು. ಇನ್ನು ವ್ಯರ್ಥ ಕಾಲಕ್ಷೇಪ ಮಾಡುವಂತಿಲ್ಲ. ನಿಜ, ದೇಹಕ್ಕೆ ವಯಸ್ಸಾಗಿದೆ. ಹಿಂದಿನಷ್ಟು ದೈಹಿಕ ಸಾಮರ್ಥ್ಯವಿಲ್ಲ. ಆದರೆ, ಈ ಲೋಪವನ್ನು, ಸದೃಢ ಮನಸ್ಸು, ಹೃದಯ ಮತ್ತು ಆತ್ಮಬಲದಿಂದ ಸಮಬಲಗೊಳಿಸಿಕೊಳ್ಳಬೇಕಾಗಿದೆ. ಈ ಹೊಸದಾರಿಯಲ್ಲಿ, ಜೀವನದ ಅಂತಿಮ ಕ್ಷಣದವರೆಗೆ ನಿವೃತ್ತಿ ಪಡೆಯದೇ, ನಿರಂತರ ಶ್ರಮ, ಹುಡುಕಾಟ, ಜ್ಞಾನದಾಹ ಮತ್ತು ಸೋಲೊಪ್ಪಿಕೊಳ್ಳದ ಪ್ರಯತ್ನದಿಂದ ಮುಂದುವರಿದಲ್ಲಿ ಒಂದು ತೃಪ್ತ ಪೂರ್ಣವಿರಾಮ ಕಾಣಬಹುದು.'

ಹೀಗೆ, ಟೆನ್ನಿಸನ್ ನ ಯುಲಿಸೆಸ್, ಜೀವನದ ಕೊನೆಯ ಕ್ಷಣದವರೆಗೆ ಬದುಕನ್ನು ಪರಿಪೂರ್ಣವಾಗಿ ಆಸ್ವಾದಿಸುವುದು ಅರ್ಥಪೂರ್ಣ ಬದುಕೆನ್ನುವುದನ್ನು ತಿಳಿಹೇಳುತ್ತಾನೆ. ಇಂಗ್ಲಿಷ್ ಸಾಹಿತಿ ಸಿ.ಎಸ್. ಲೂಯಿಸ್ ಹೇಳಿದಂತೆ "ಹೊಸ ಗುರಿ ಅಥವಾ ಕನಸನ್ನು ಕಾಣಲು ವಯಸ್ಸು ಎಂದಿಗೂ ಹಿನ್ನೆಡೆಯಲ್ಲ." ಶಾಸ್ತ್ರ, ಪುರಾಣಗಳು ಏನೇ ಹೇಳಲಿ, ಜಗತ್ತಿನ ಶ್ರೇಷ್ಠ ತತ್ವಶಾಸ್ತ್ರಜ್ಞರು ಕಂಡುಕೊಂಡ ಜೀವನದರ್ಶನ ಹೇಳುವಂತೆ, ಬದುಕು ಇರುವುದು ವರ್ತಮಾನದಲ್ಲಿ ಮಾತ್ರ. ಅದನ್ನು ಸಂಪೂರ್ಣವಾಗಿ ಸದುಪಯೋಗಪಡಿಸಿಕೊಳ್ಳುವುದಲ್ಲಿ ಜೀವನದ ಸಾರ್ಥಕತೆ ಅಡಗಿದೆ. ಈ ದಾರಿಯಲ್ಲಿ ನಡೆಯಲು, ಪ್ರಾಪಂಚಿಕ ನಿರೀಕ್ಷೆಗಳಿಗಿಂತ ವೈಯಕ್ತಿಕ ನಿರೀಕ್ಷೆಗಳಿಗೆ ಮಹತ್ವ ನೀಡುವುದು ಮುಖ್ಯ. ಇದನ್ನು ಸಂಕ್ಷಿಪ್ತವಾಗಿ ಕುವೆಂಪು ಮಾತಿನಲ್ಲಿ ಹೇಳುವುದಾದರೆ, 'ಎಲ್ಲಿಯೂ ನಿಲ್ಲದಿರು, ಮನೆಯನೆಂದು ಕಟ್ಟದಿರು, ಕೊನೆಯನೆಂದು ಮುಟ್ಟದಿರು, ಓ ಅನಂತವಾಗಿರು...'



**ಡಾ. ಜ್ಯೋತಿ**
**ಸಹಾಯಕ ಪ್ರಾಧ್ಯಾಪಕರು,**
**ಇಂಗ್ಲಿಷ್ ವಿಭಾಗ,**
**ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು**



# ಸಂಪಾದಕ ವಾಣಿ

**ನಾರಾಯಣ**
ಶೆಟ್ಟಿಗಾರ್

**ಮಾರ್ಚ್ 32, 1381.**

ನಗಬೇಡಿ. ಇಂಗ್ಲೆಂಡಿನ ರಾಜ ರಿಚರ್ಡ್ II ಮತ್ತು ಬೊಹೇಮಿಯಾದ ರಾಣಿ ಅನ್ನಿ ಮದುವೆಯಾಗುವುದೆಂದು ನಿರ್ಧರಿಸಿ, ನಿಶ್ಚಿತಾರ್ಥಕ್ಕೆ ನಿಗದಿ ಮಾಡಿದ ದಿನ ಅದು.

ಪ್ರಜೆಗಳೆಲ್ಲರೂ ಸಂತೋಷ ಹೊಂದಿ ಸಂಭ್ರಮಿಸಲು ಆ ದಿನವನ್ನೇ ಕಾಯತೊಡಗಿದರು. ಆದರೆ ಅವರಿಗೆ ವಾಸ್ತವದ ಅರಿವು ಆದುದು ತಡವಾಗಿ. ಮಾರ್ಚ್ ನಲ್ಲಿ 32ನೇ ತಾರೀಕು ಇಲ್ಲ; 31ನೇ ತಾರೀಕು ತಿಂಗಳ ಕೊನೆಯ ದಿನ. ಆಗಲೇ ಅವರ ಅರಿವಿಗೆ ಬಂದದ್ದು ತಾವು ಮೂರ್ಖರಾದೆವೆಂದು. ಅಂದಿನಿಂದ ಜನರು ಪ್ರತಿ ವರ್ಷ ಏಪ್ರಿಲ್ 1ನೇ ದಿನವನ್ನು ಅಂದರೆ ಮಾರ್ಚ್ 31ರ ಮರುದಿನವನ್ನು ಮೂರ್ಖರ ದಿನವಾಗಿ ಆಚರಿಸಲು ಪ್ರಾರಂಭ ಮಾಡಿದರಂತೆ.

ಮೂರ್ಖರ ದಿನದಂದು ಮಕ್ಕಳಿಂದ ಹಿಡಿದು ಮುದುಕರ ವರೆಗೆ ಎಲ್ಲರೂ ತಮ್ಮ ಎದುರು ಸಿಕ್ಕಿದವರನ್ನು ಮೂರ್ಖರನ್ನಾಗಿ ಮಾಡಿ ಸಂತೋಷ ಪಡುವ ಪ್ರಯತ್ನ ಮಾಡುತ್ತಾರೆ. ಸಣ್ಣ ಸಣ್ಣ ವಿಷಯಗಳಿಂದ ಹಿಡಿದು, ಗಂಭೀರ ವಿಷಯಗಳೂ ಮೂರ್ಖರನ್ನಾಗಿ ಮಾಡುವುದಕ್ಕೆ ಆಹಾರವಾಗುತ್ತವೆ. ವ್ಯಕ್ತಿಯನ್ನು ಮೂರ್ಖನನ್ನಾಗಿಸಿದ ಮೇಲೆ 'ಏಪ್ರಿಲ್ ಫೂಲ್' ಎಂದು ಘೋಷಣೆ ಮಾಡಿ ನಗುತ್ತಾರೆ. ವಿಶೇಷವೆಂದರೆ ಸತ್ಯ ವಿಷಯ ತಿಳಿದ ಮೇಲೆ ಮೂರ್ಖರಾದವರೆಲ್ಲರೂ ನಕ್ಕು ಸುಮ್ಮನಾಗಿ ಬಿಡುತ್ತಾರೆ; ಮಾತ್ರವಲ್ಲ, ತನ್ನಿಂದ ಮೂರ್ಖನಾಗುವ ಹೊಸ ಬಲಿಪಶುವಿಗಾಗಿ ಹುಡುಕತೊಡಗುತ್ತಾರೆ.

ವಾಸ್ತವದಲ್ಲಿ ಇದು ನಮ್ಮ ದೇಶದ ಆಚರಣೆಯಲ್ಲ. ಪಾಶ್ಚಾತ್ಯರನ್ನು ಅನುಕರಿಸುವುದೇ ನಾಗರಿಕತೆಯೆಂದು ನಂಬಿಕೊಂಡು ಬಂದಿರುವ ನಾವು ಮೂರ್ಖರ ದಿನವನ್ನು ಆಚರಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಹಾಗೆ ನೋಡಿದರೆ ಏಪ್ರಿಲ್ ಒಂದನೇ ದಿನ ನಮ್ಮ ಸರಕಾರ ಮಾನ್ಯ ಮಾಡಿರುವ ವಿತ್ತೀಯ ವರ್ಷದ ಮೊದಲ ದಿನ. ನಮ್ಮ ವಿತ್ತೀಯ ವರ್ಷದ ಮೊದಲ ದಿನವೇ ನಮಗೆ ಮೂರ್ಖರ ದಿನ! ಇದೂ ಒಂದು ವಿಪರ್ಯಾಸವಲ್ಲವೆ?

ಇರಲಿ ಬಿಡಿ, ಮೂರ್ಖರ ದಿನವನ್ನು ಆಚರಿಸೋಣ. ಆದರೆ ನಾವು ಮಾತ್ರ ಮೂರ್ಖರಾಗುವುದು ಬೇಡ.

# ಕುಡುಕ - ಕುಡುಕನೇ?

ವಾರಾಂತ್ಯದಲ್ಲಿ ಯಾವುದೇ ಪರವೂರಿಗೆ ಪ್ರಯಾಣಿಸುವುದಂತೂ ಬಹಳ ಪ್ರಯಾಸದ ಕೆಲಸ. ಸರಿಯಾಗಿ ಟ್ರಾವೆಲ್ ಪ್ಲಾನ್ ಮಾಡದಿದ್ದರಂತೂ ಬಸ್ ಸ್ಟ್ಯಾಂಡಿನಲ್ಲಿ ಪರದಾಡಲೇಬೇಕಾದ ಪರಿಸ್ಥಿತಿ ಬರುವುದು ನಿಶ್ಚಿತ!

ಶಂಕರನಿಗಂತೂ ಈ ಚಡಪಡಿಕೆಯಲ್ಲಿಯೇ ಹಾಗೂ ಕಡಿಮೆ ವ್ಯಯದಲ್ಲಿಯೇ, ಪ್ರಯಾಣಿಸುವುದಂತೂ ರೂಢಿ ಆಗ್ಬಿಟ್ಟಿದೆ.

ತರಾತುರಿಯಲ್ಲಿ ಓಡಿ ಬಂದವನೇ ಟಿಕೆಟ್ ಬುಕಿಂಗ್ ಕಡೆಗೆ ಧಾವಿಸುತ್ತಾ ಕ್ಯೂನಲ್ಲಿ ಆತುರ -ಆತುರವಾಗಿ ನುಗ್ಗಿ ಶಂಕರ್ "ಸರ್ ಸರ್, ಬೆಂಗಳೂರಿಗೆ ಟಿಕೆಟ್ ಖಾಲಿ ಇದೆಯಾ?" ಎಂದು ಕೇಳುವನು. ಯಥಾಪ್ರಕಾರ ಒಂದೇ ರಾಗದಲ್ಲಿ "ಸೀಟ್ ಯಾವುದೂ ಇಲ್ಲ. ಎದುರುಗಡೆ ಬಸ್ ಸ್ಟ್ಯಾಂಡಿನಲ್ಲಿ ಕಂಡಕ್ಟರ್ ವಿಚಾರಿಸಿ, ಸೀಟು ಇದ್ದರೆ ಕೊಡುತ್ತಾರೆ ಹೋಗಿ" ಎಂದರು ಪ್ರತಿಯೊಂದು ಬರುವ ಬಸ್ ಅನ್ನು ವಿಚಾರಿಸಿ, ವಿಚಾರಿಸಿ ಬೇಸತ್ತಿರುತ್ತಾನೆ ಶಂಕರ. ಏತನ್ಮಧ್ಯೆ ಒಂದು ಬಸ್ಸು ಬಂದೇ ಬಿಡ್ತು. ತನ್ನ ನಿಲುಗಡೆಯ ಸರದಿಗಾಗಿ ಹರಸಾಹಸ ಪಡುತ್ತಿತ್ತು. ಈ ಗೊಂದಲದಲ್ಲಿ ಇರುವಾಗಲೇ ಒಬ್ಬ ಯೌವನ ಕುಡುಕ ತೂರಾಡುತ್ತಾ ಬಂದು, ಏರ್ರಾ ಬಿರ್ರಿ ಮಾತಾಡುತ್ತಾ "ಇತ್ತ ಬಾರೋ", "ಲೋ ಅತ್ತ ಬಾರೋ", "ರೈಟ್... ರೈಟ್... ಪೋಯಿ" ಎಂದೋ ಕರೆದು ಗೋಗರೆಯುತಿರುವನು. ಆತನು ಬೊಬ್ಬೆ ಇಡುತ್ತಿರುವಾಗಲೇ ಅದೊಂದು ಬಸ್ಸು ತನ್ನ ನಿಲುಗಡೆ ಸ್ಥಾನದಲ್ಲಿ ನಿಲ್ಲಿಸುತ್ತಿರುವಾಗಲೇ ಈ ಕುಡುಕ "ಲೋ ಇತ್ತ ಸರಿಯೋ" ಎಂದು ಡ್ರೈವರ್ ಬಾಗಿಲನ್ನು ತಟ್ಟಿ ಎಚ್ಚರಿಸುತ್ತಿರುವನು. ಅಷ್ಟರಲ್ಲಿ ಕೋಪಿಷ್ಟನಾದ ಡ್ರೈವರ್ "ಹೋಗೋ ದೂರ, ಲೌಡ" ಎಂದು ತರಾತುರಿಯಿಂದ ಬಸ್ಸನ್ನು ಇಳಿದವನೇ, ಕುಡುಕನನ್ನು ಡ್ರೈವರ್ ತನ್ನ ಬಾಹುಬಲದ ಶಕ್ತಿಯನ್ನು ಬಳಸಿ ನೂಕಲು ಶುರು ಮಾಡುವನು. ಡ್ರೈವರ್ ನ ಒಂದೇ ಹೊಡೆತಕ್ಕೆ ತೂರಾಟದ ಆ ಕುಡುಕ ತನ್ನ ದೈಹಿಕ ಬಲವನ್ನೇ ಕಳಕೊಂಡವನಂತೆ ನೆಲಕ್ಕೆ ಅಪ್ಪಳಿಸಿ ಬಿದ್ದೆ ಬಿಡ್ತಾನೆ. ಸಿಮೆಂಟ್ ನೆಲಕ್ಕೆ ಬಿದ್ದರಷ್ಟೇ ಏನೂ ಹೇಳುತ್ತಿರಲಿಲ್ಲ; ಆದರೆ ಬಿದ್ದವನು ಕೆಳ ಮುಖವಾಗಿ ಇಳಿಕೆಯ ಮೆಟ್ಟಲುಗಳ ನಡುವೆ ತಲೆಕೆಳಗಾಗಿ ಬಿದ್ದುಬಿಡುತ್ತಾನೆ-"ಧಢಲ್ಲನೇ" ಎಂಬ ಶಬ್ದದಿಂದಲೇ. ಪುಣ್ಯಕ್ಕೆ, ಯಾವುದೇ ಗಾಯ ಆಗಲಿಲ್ಲ ಆತನಿಗೆ. ಆದರೆ ಈ ಸನ್ನಿವೇಶವನ್ನು ಪ್ರತ್ಯಕ್ಷ ದರ್ಶಿಯಾಗಿ ನೋಡಿದ ಶಂಕರನಿಗಂತೂ ತುಂಬಾ ಬೇಸರವಾಯಿತು.

ಕುಡುಕನಾದರೂ ಕುಡಿದಿದ್ದಾನೆ; ತನ್ನ ದೇಹದ, ಮನಸ್ಸಿನ ಮೇಲೆ ಸ್ಥಿಮಿತವನ್ನೇ ಕಳೆದುಕೊಂಡಿರುತ್ತಾನೆ. ಸದೃಢವಾದ ಮನೋ ಬಾಹುಳ್ಯವನ್ನು ಹೊಂದಿದ ಆ ಡ್ರೈವರ್ ಅಂತೂ ಕೋಪದಲ್ಲಿ, ಸಾರ್ವಜನಿಕವಾಗಿ ನಡೆದುಕೊಂಡ ನಡತೆ ಬಹಳ ಹೀನಾಯವಾಗಿತ್ತು. "ತಾಳ್ಮೆ ತಾಳ್ಮೆ" ಎಂದು ಎಚ್ಚರಿಸಿದ ಸಹ ಕಂಡಕ್ಟರ್ ಮಾತನ್ನು ಧಿಕ್ಕರಿಸಿ ಹೊಡೆದೇ ಬಿಟ್ಟಿದ್ದಾ ಆ ಕುಡುಕನಿಗೆ.

"ಅಲ್ಲಯ್ಯ ನಿನ್ನ ದುರಾದೃಷ್ಟಕ್ಕೆ ಆತನೇನಾದರೂ ಪ್ರಾಣ ಕಳೆದುಕೊಂಡಿದ್ದರೆ, ನಿನ್ನ ಸರ್ಕಾರಿ ನೌಕರಿಯ ಸ್ಥಿತಿ ಏನಾಗಬೇಕಾಗಿತ್ತು? ನಿನ್ನ ಸಂಸಾರದ ಕಥೆ ಏನಾಗಬೇಕಾಗಿತ್ತು? ಹೆಂಡತಿ ಮಕ್ಕಳ ಪರಿಸ್ಥಿತಿ ಏನು? ಯಾವುದನ್ನಾದರೂ ಯೋಚನೆ ಮಾಡಿದ್ದಿಯಾ? - ಎಂದು ಸಹೋದ್ಯೋಗಿ ಎಚ್ಚರಿಸುತ್ತಿರುವಾಗಲೇ, ಸಾಂದರ್ಭಿಕವಾಗಿ ಆತನ ಅಮ್ಮನ ಫೋನು ರಿಂಗಣಿಸಿ ಜ್ಞಾನೋದಯವಾದಂತಾಗಿ ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಎಂಬಂತೆ ಕುಡುಕನನ್ನು ಎಬ್ಬಿಸಿ ಆಧರಿಸುವ ಕೆಲಸಕ್ಕೆ ಮುಂದಾಗುತ್ತಿರುವಂತೆ, ಮತ್ತೊಬ್ಬ ಪ್ರಯಾಣಿಕ ತನ್ನಲ್ಲಿರುವ ಒಂದು ವಾಟರ್ ಬಾಟಲ್ ನೀರನ್ನು ಕುಡುಕನ ತಲೆಗೆ ಒಂದೇ ಸವನೆ ಸುರಿಯುತ್ತಿರುವನು - "ತಲೆಗೆ ಏರಿದ ಪಿತ್ತ ಇಳಿಯಲಿ" ಎಂಬಂತೆ.




ಕುಡುಕನು ತಾನು ಕುಡಿತಕ್ಕೆ ಬಲಿಯಾಗುವ ಮಾನಸಿಕ ಪರಿಸ್ಥಿತಿಯೇ ಬೇರೆ. ಈ ಆತನ ಪರಿಸ್ಥಿತಿಗೆ ಸಾಮಾಜಿಕವಾಗಿ ಪರೋಕ್ಷವಾಗಿ ನಮ್ಮ ವ್ಯವಸ್ಥೆಯೇ ಕಾರಣವಾಗಿರುತ್ತದೆ. ಈ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳದ ಪ್ರಜ್ಞಾವಂತ ಸಮಾಜ ತನ್ನ ಗದಾ ಪ್ರಹಾರವನ್ನು ಮಾಡಿಯೇ ಬಿಡುತ್ತದೆ! ಎಂಬುದು ಶಂಕರನ ವೇದನೆ.

ಈ ಬಗ್ಗೆ ನಾವೆಲ್ಲರೂ ಚಿಂತಿಸಬೇಕಾದುದೇ ಅಲ್ಲವೇ?



ಎಕ್ಕಾರ್ ಡಿ. ಪಿ. ಶೆಟ್ಟಿಗಾರ್
ಶೇಷಾದ್ರಿಪುರಂ, ಬೆಂಗಳೂರು

# ರೇಟಿಂಗ್ ಚೀಟಿಂಗ್

ಆತ: "ಹಲೋ, ರೇಟಿಂಗ್ ಕಂಪೆನಿ?"

ರೇಟಿಂಗ್ ಕಂಪೆನಿ: "ಹೌದು. ವಾಟ್ ಕ್ಯಾನ್ ವಿ ಡು ಫಾರ್ ಯು?"

ಆತ: "ನಮ್ಮ ಹೊಸ ಪಿಕ್ಚರ್ "ಎಲ್ರೂ ಒಳ್ಳೆಯವರು" ಈ ವಾರ ಬಿಡುಗಡೆಯಾಗಿದೆ. "ಬುಕ್‌ಮೈ ಮೂವೀಸ್" ಸೈಟಿನಲ್ಲಿ ನಮ್ಮ ಚಿತ್ರಕ್ಕೆ ಒಳ್ಳೆಯ ರೇಟಿಂಗ್ ಬರುವ ಹಾಗೆ ಮಾಡ್ಬೇಕು"

ರೇ.ಕಂ: "ಮಾಡೋಣ ಸಾರ್. ನಾವಿರೋದೇ ಅದಕ್ಕೆ. ನಿಮ್ಮ ಚಿತ್ರಕ್ಕೆ ಈಗ ರೇಟಿಂಗ್ ಎಷ್ಟಿದೆ?"

ಆತ: "ಈಗ 10/9 ಇದೆ"

ರೇ.ಕಂ: "ಓ! ಒಳ್ಳೆಯ ರೇಟಿಂಗ್ ಉಂಟಲ್ಲ?"

ಆತ: "ಆದ್ರೆ ನಮ್ಮ ಪಿಕ್ಚರ್‌ಗೆ ಕಾಂಪಿಟೀಷನ್ ಕೊಡೋ "ಕೈ ಕೊಟ್ಟವರು" ಎಂಬ ಇನ್ನೊಂದು ಚಿತ್ರವಿದೆ. ಅದರ ರೇಟಿಂಗ್ 10/8 ಇದೆ. ಹಾಗಾಗಿ ನಮ್ಮ ರೇಟಿಂಗ್ ಇನ್ನೂ ಏರಬೇಕು. ಅದು ಕೆಳಕ್ಕೆ ಇಳಿಯಬೇಕು"

ರೇ.ಕಂ: "ಓ. ಹಾಗೆ! ಸರಿ, ಮಾಡೋಣ"

ಆತ: "ಹೇಗೆ ಮಾಡ್ತೀರ?"

ರೇ.ಕಂ: "ಅದು ಟ್ರೇಡ್ ಸೀಕ್ರೆಟ್! ನಾವು ಮಾಡಿ ತೋರಿಸ್ತೀವಿ"

ಆತ: "ಸರಿ, ನಿಮ್ಮ ಫೀಸ್ ಹೇಗೆ?"

ರೇ.ಕಂ: "ನಮ್ಮಲ್ಲಿ ಒಳ್ಳೆಯ ಒಂದು ಪ್ಯಾಕೇಜ್ ಉಂಟು. ನಿಮ್ಮ ರೇಟಿಂಗ್ ಜಾಸ್ತಿ ಮಾಡಲು ಒಂದು ಲಕ್ಷ. ನಿಮ್ಮ ಕಾಂಪಿಟೀಷನ್‌ನವರ ರೇಟಿಂಗ್ ಇಳಿಸಲು ಎರಡು ಲಕ್ಷ. ಒಟ್ಟಿಗೆ ಮೂರು ಲಕ್ಷ."

ಆತ: "ಅಲ್ರೀ, ಏರಿಸಲು ಒಂದು ಲಕ್ಷ. ಇಳಿಸಲು ಯಾಕ್ರೀ ಎರಡು ಲಕ್ಷ?"

ರೇ.ಕಂ: "ಸಾರ್, ರೇಟಿಂಗ್ ಏರಿಸುವುದು ಒಳ್ಳೆಯ ಕೆಲಸ. ಆದ್ರೆ ಪಾಪ, ಇನ್ನೊಬ್ಬರ ರೇಟಿಂಗ್ ಇಳಿಸುವುದು ಪಾಪದ ಕೆಲಸ. ಹಾಗಾಗಿ ನಮ್ಮ ಹುಡುಗರಿಗೆ ಪಾಪ ಪ್ರಜ್ಞೆ ಇರುವ ಕಾರಣ ಅವರಿಗೆ ಡಬ್ಬಲ್ ಹಣ ಕೊಟ್ಟು ಒಪ್ಪಿಸಬೇಕು"

ಆತ: "ನಿಮ್ಮ ಫೀಸ್ ಜಾಸ್ತಿಯಾಯ್ತು!"

ರೇ.ಕಂ: "ಹೋಗ್ಲಿ. ನಿಮಗೆ ಒಂದು ಸ್ಪೆಷಲ್ ಪ್ಯಾಕೇಜ್ ಕೊಡ್ತೇನೆ. ಎರಡು ಲಕ್ಷ ಐವತ್ತು ಸಾವಿರ"

ಆತ: [ರೇಗುತ್ತಾ] ಅದೆಲ್ಲ ಆಗಲ್ಲರೀ! ತುಂಬಾ ಜಾಸ್ತಿಯಾಯ್ತು. ನಾನು ಇಪ್ಪತ್ತು ಸಾವಿರ ಕೊಡ್ತಿದ್ದೇನೆ. ಹತ್ತು ಏರಿಸಲು, ಹತ್ತು ಇಳಿಸಲು"

ರೇ.ಕಂ: "ಅಯ್ಯೋ! ಅಷ್ಟು ಕಮ್ಮಿ! ನೋ ಸಾರ್..., ಹೋಗ್ಲಿ, ನೀವು ಮೊದಲ ಬಾರಿಗೆ ನಮ್ಮಲ್ಲಿಗೆ ಬಂದಿದ್ದೀರ. ಹಾಗಾಗಿ ಎರಡು ಲಕ್ಷ ಕೊಡಿ ಸಾಕು. ಅದಕ್ಕಿಂತ ಒಂದು ರುಪಾಯಿ ಕಮ್ಮಿ ಆಗಲ್ಲ. ನೀವು ಎಸ್, ಅಂದ್ರೆ ನಮ್ಮ ಹುಡುಗ್ರು ಈಗ್ಲೇ ಕೆಲಸ ಸುರು ಮಾಡ್ತಾರೆ"

ಆತ: [ಖಡಕ್ಕಾಗಿ] "ನೋ! ಮೂವತ್ತು ಸಾವಿರಕ್ಕಿಂತ ಒಂದು ರುಪಾಯಿ ಜಾಸ್ತಿಯಿಲ್ಲ"

ರೇ.ಕಂ: [ರೇಗುತ್ತಾ] "ನಾವು ಅಷ್ಟು ಚೀಪ್ ರೇಟಿಂಗ್ ಕಂಪೆನಿ ಅಲ್ಲ"

ಆತ: "ರೀ, ನೀವು ಮಾಡೋದೇ ರೇಟಿಂಗ್ ಚೀಟಿಂಗ್ ಕೆಲಸ. ಅಂತ ಚೀಪ್ ಕೆಲಸಕ್ಕೆ ಲಕ್ಷ ಕೊಡೋಕೆ ಆಗುತ್ತ?"

ರೇ.ಕಂ: [ಕೋಪದಿಂದ] "ನೀವು ನಮ್ಮ ಕಂಪೆನಿಗೆ ಅವಮಾನ ಮಾಡ್ತಿದ್ದೀರಾ!"



ಆತ: "ರೀ, ನೀವು ಮಾಡೋ ಮನೆಹಾಳು ಕೆಲಸಕ್ಕೆ ನಿಮಗೆ ಕಂಪೆನಿ ಬೇರೆ ಕೇಡು!"

ರೇ.ಕಂ: "ಸಾರ್, ನಾವು ಮನಸ್ಸು ಮಾಡಿದ್ರೆ ನಿಮ್ಮ ರೇಟಿಂಗ್ ಏನಾಗುತ್ತೆ, ಗೊತ್ತ?"

ಆತ: "ಏನ್ರೀ, ನಮಗೆ ಹೆದರಿಸ್ತಿದ್ದೀರಾ? ನೀವೇನು ನಮ್ಮ ರೇಟಿಂಗ್ ಹೆಚ್ಚಿಸೋದು? ನಾನೇ ನಮ್ಮ ಹುಡುಗರನ್ನು ಇಟ್ಟು ನಮ್ಮ ರೇಟಿಂಗ್ ಜಾಸ್ತಿ ಮಾಡ್ತೇನೆ. ಅವರದ್ದು ಇಳಿಸ್ತೇನೆ, ನೋಡ್ತಿರಿ. ಇವತ್ತು ಸಂಜೆ ಆಗುವಾಗ ನಮ್ಮ "ಎಲ್ರೂ ಒಳ್ಳೆಯವರು" ಚಿತ್ರದ ರೇಟಿಂಗ್ ಹೇಗೆ ಮೇಲೆ ಹೋಗ್ತದೆ ಅಂತ" ಎಂದು ಬೈದು ಫೋನಿಟ್ಟ.

ರೇಟಿಂಗ್ ಕಂಪೆನಿಯವನು ಕೋಪದಿಂದ ಕೊತಕೊತ ಕುದಿಯುತ್ತಿದ್ದ. ಅವನು ತಕ್ಷಣ ಒಂದು ವರ್ಚುವಲ್ ಮೀಟಿಂಗ್ ಕರೆದ. ಬೇರೆಬೇರೆ ಕಡೆಯಿಂದ ಅವನ ತಂಡದ ಇನ್ನೂರು ಮಂದಿ ಮೀಟಿಂಗ್ ಅಟೆಂಡ್ ಮಾಡಿದ್ರು. ರೇಟಿ ಹೇಳಿದ "ನೋಡಿ, ಈ ವಾರ "ಎಲ್ರೂ ಒಳ್ಳೆಯವರು" ಎಂಬ ಒಂದು ಪಿಕ್ಚರ್ ಬಿಡುಗಡೆಯಾಗಿದೆ. ಆ ಚಿತ್ರ ತಂಡದವನು ನಂಗೆ ಫೋನ್ ಮಾಡಿ ಅವರ ರೇಟಿಂಗ್ ಜಾಸ್ತಿ ಮಾಡಲು ಹೇಳಿದ. ಆದ್ರೆ ನಮ್ಮ ರೇಟ್ ಕೇಳಿದ ತಕ್ಷಣ ಆತ ನಮ್ಮ ಪ್ರೊಫೆಷನ್‌ಗೆ ಅವಮಾನ ಮಾಡಿದ. ನಾವು ಅವನಿಗೆ ಬುದ್ಧಿ ಕಲಿಸಬೇಕು. ಗೊತ್ತಾಯ್ತಲ್ಲ?" ಎಂದ. ತಕ್ಷಣ ಎಲ್ಲರೂ "ಗೊತ್ತಾಯ್ತು, ಬಾಸ್" ಎಂದರು. ಆಗ ರೇಟಿಗೆ ಇನ್ನೇನೋ ಹೊಳೆದು, "ಆಮೇಲೆ ಇನ್ನೊಂದು ವಿಷಯ, ನಮಗೆ ಅವಮಾನ ಮಾಡಿದವರ ಕಾಂಪಿಟೀಷನ್ ಚಿತ್ರ "ಕೈ ಕೊಟ್ಟವರು" ಇದರ ರೇಟಿಂಗ್ ಮೇಲೆ ಹೋಗ್ಲಿ. ಹೋಗಿ ತಕ್ಷಣ ಕೆಲಸ ಸುರುಮಾಡಿ" ಎಂದ.

ಅಂದು ಸಂಜೆ ಕಂಪ್ಯೂಟರ್ ಮುಂದೆ ಕುಳಿತ "ಎಲ್ರೂ ಒಳ್ಳೆಯವರು" ಚಿತ್ರದ ಅಮಾಯಕ ಡೈರೆಕ್ಟರ್ ತನ್ನ ಅತ್ಯಂತ ಮಹತ್ವಾಕಾಂಕ್ಷೆಯ ಚಿತ್ರದ ರೇಟಿಂಗ್ ಚೆಕ್ ಮಾಡಿದ. ಬೆಳಿಗ್ಗೆ 9 ಇದ್ದ ಅವನ ಚಿತ್ರದ ರೇಟಿಂಗ್ ಇದ್ದಕ್ಕಿದ್ದಂತೆ ಕುಸಿಯುತ್ತಾ ಹೋಯಿತು. ಬೆಳಿಗ್ಗೆಯಿಂದ ಸುಮಾರು ಒಂದು ಸಾವಿರದಷ್ಟು ಜನರು ಆ ಚಿತ್ರಕ್ಕೆ 1 ರೇಟಿಂಗ್ ಕೊಟ್ಟ ಕಾರಣ ರೇಟಿಂಗ್ ಪಾತಾಳಕ್ಕೆ ಕುಸಿಯಿತು. ಈಗ ಬರೇ 5 ರೇಟಿಂಗ್. ಹೀಗೆ ರೇಟಿಂಗ್ ಕಡಿಮೆ ಇದ್ರೆ ಯಾರೂ ಥಿಯೇಟರಿಗೆ ಬರಲ್ಲ! ಅವನಿಗೆ ಏನಾಗುತ್ತಿದೆ ಎಂದು ಗೊತ್ತಾಗದೆ ದಿಗ್ಭ್ರಮೆಯಲ್ಲಿ ತಲೆಮೇಲೆ ಕೈಯಿಟ್ಟು ಕುಸಿದ.

ಇತ್ತ "ಆತ" ಲ್ಯಾಪ್‌ಟಾಪ್ ನೋಡುತ್ತಾ "ಎಲ್ರೂ ಒಳ್ಳೆಯವರು" ಚಿತ್ರದ ರೇಟಿಂಗ್ ಕುಸಿಯುವುದನ್ನು ನೋಡಿ ಸಂಭ್ರಮಿಸುತ್ತಾ ತನ್ನವರಿಗೆ ಹೇಳುತ್ತಿದ್ದ "ಎಲ್ರೂ ಒಳ್ಳೆಯವರು" ಚಿತ್ರದವನು ಒಂದು ಸೃಜನಾತ್ಮಕ ಚಿತ್ರ ಮಾಡಿದ್ದೇವೆ. ತಮ್ಮ ಚಿತ್ರವನ್ನು ಜನಗಳು ಥಿಯೇಟರಿಗೆ ಬಂದು ನೋಡ್ತಾರೆ. ಒಳ್ಳೆಯ ರೇಟಿಂಗ್ ಕೊಡ್ತಾರೆ, ಅಂತ ಭಾರೀ ಜಂಭ ಕೊಚ್ಚುಕೊಳ್ಳುತ್ತಿದ್ದ. ಅವನಿಗೆ ನಾನು ಒಂದು ರುಪಾಯಿ ಖರ್ಚು ಮಾಡದೆ ಸರಿಯಾಗಿ ಇಕ್ಕಿದ್ದೇನೆ. ಇನ್ನು ಅವನ ಪಿಕ್ಚರ್ ರೇಟಿಂಗ್ ತಲೆ ಎತ್ತಲ್ಲ. ಅದನ್ನು ನೋಡಲು ಯಾರೂ ಥಿಯೇಟರಿಗೆ ಹೋಗಲ್ಲ. ಆದರೆ ನಮ್ಮ "ಕೈ ಕೊಟ್ಟವರು" ಚಿತ್ರಕ್ಕೆ ಈಗ ಒಳ್ಳೆಯ ರೇಟಿಂಗ್ ಬರ್ತಿದೆ. ಹಾಗಾಗಿ ನಮ್ಮ ಪಿಕ್ಚರ್ ಹಿಟ್ ಗ್ಯಾರಂಟಿ!" ಎಂದು ಮೀಸೆ ತಿರುವಿದ.

[ಇದು ಒಂದು ವಿಡಂಬನೆ ಅಷ್ಟೇ. ಕೆಲವು ಚಿತ್ರಗಳಿಗೆ ಜನಗಳ ರೇಟಿಂಗ್ ಪ್ಯಾಟರ್ನ್ ನೋಡಿ ಹೊಳೆದಿದ್ದು. There must be some game in movie rating!]



ರಮೇಶ್ ಶೆಟ್ಟಿಗಾರ್ ಮಂಜೇಶ್ವರ
ಸುಂದರ್‌ರಾಮ್ ಶೆಟ್ಟಿ ನಗರ,
ಬೆಂಗಳೂರು






ಯತೀಶ್ ಎಲ್. ಶೆಟ್ಟಿಗಾರ್,
ಸಿದ್ಧಕಟ್ಟೆ ,
ವಿದ್ಯಾರಣ್ಯಪುರ, ಬೆಂಗಳೂರು




# ಅಸಲಿ ಚಿನ್ನ

ಅಕ್ಕಸಾಲಿಗರು ತೀರಿಕೊಂಡ ಮೇಲೆ ಅವರ ಪತ್ನಿ ಮತ್ತು ಮಗನ ಜೀವನ ಬಹಳ ದುಸ್ತರವಾಗಿತ್ತು. ಬಡತನದ ಬೇಗೆಯಿಂದ ಅವರು ಬಸವಳಿದಿದ್ದರು. ದಿನ ದೂಡುವುದೇ ಅವರಿಗೆ ಕಷ್ಟವಾಗಿತ್ತು. ಒಂದು ದಿನ ತಾಯಿ ಮಗನನ್ನು ಕರೆದು, ತನ್ನ ಚಿನ್ನದ ಸರವನ್ನು ಅವನ ಕೈಗೆ ಕೊಟ್ಟು, "ಮಗೂ, ಈ ಸರವನ್ನು ತೆಗೆದುಕೊಂಡು ಹೋಗಿ ನಿನ್ನ ಮಾವನ ಕೈಗೆ ಕೊಟ್ಟು, ಇದನ್ನು ಮಾರಿ ಹಣ ಕೊಡಲು ಹೇಳು" ಎಂದರು. ಮಗ ಮಾವನ ಚಿನ್ನದ ಅಂಗಡಿಗೆ ಹೋಗಿ, ಮಾವನ ಕೈಯಲ್ಲಿ ತಾಯಿಯ ಸರವನ್ನು ಕೊಟ್ಟು, ತಾಯಿ ಹೇಳಿದಂತೆ ಅದನ್ನು ಮಾರಿ ಹಣ ಕೊಡುವಂತೆ ಹೇಳಿದ.

ಮಾವ ಆ ಸರವನ್ನು ಒರೆಗೆ ಹಚ್ಚಿ ನೋಡಿದರು. ಅದು ನಕಲಿ ಚಿನ್ನ ಎಂದು ಅವರಿಗೆ ತಿಳಿಯಿತು. ಸರವನ್ನು ಆ ಹುಡುಗನ ಕೈಗೆ ಕೊಟ್ಟು "ಮಗೂ, ಈಗ ಚಿನ್ನದ ಬೆಲೆ ತುಂಬಾ ಕಡಿಮೆಯಾಗಿದೆ. ಈಗ ಇದನ್ನು ಮಾರುವುದು ಬೇಡ. ಸ್ವಲ್ಪ ಸಮಯದ ಮೇಲೆ ಚಿನ್ನದ ಬೆಲೆ ಸುಧಾರಿಸಿದ ಮೇಲೆ ನಾನೇ ನಿನಗೆ ಹೇಳುತ್ತೇನೆ. ಆಗ ಮಾರಿದರಾಯಿತು. ಈಗ ಇದನ್ನು ನಿನ್ನ ತಾಯಿಗೆ ಹಿಂದಿರುಗಿಸು" ಎಂದು ಹೇಳಿದರು. ಹಾಗೆಯೇ ಒಂದಷ್ಟು ಹಣವನ್ನು ಅವನ ಕೈಗೆ ಕೊಟ್ಟು ಅದನ್ನು ಅವನ ತಾಯಿಗೆ ಕೊಡುವಂತೆ ಹೇಳಿದರು. ಅಷ್ಟಕ್ಕೇ ಬಿಡದೆ "ಮಗೂ ನಾಳೆಯಿಂದ ನಿನಗೆ ಬಿಡುವು ಸಿಕ್ಕಿದಾಗಲೆಲ್ಲಾ ನಮ್ಮ ಅಂಗಡಿಗೆ ಬಂದು ಬಿಡು. ನಮ್ಮ ಕುಲಕಸುಬನ್ನು ನೀನೂ ಕಲಿತ ಹಾಗಾಗುತ್ತದೆ" ಎಂದರು.

ಮಾವನ ಮಾತಿಗೆ ಗೌರವ ನೀಡಿ, ಆ ಹುಡುಗ ಮಾವನ ಅಂಗಡಿಗೆ ಹೋಗತೊಡಗಿದ. ಕೆಲವೇ ಸಮಯದಲ್ಲಿ ಚಿನ್ನವನ್ನು ಒರೆಹಚ್ಚಿ ಪರೀಕ್ಷೆ ಮಾಡುವ ವಿದ್ಯೆಯಲ್ಲಿ ಪರಿಣಿತಿಯನ್ನೂ ಪಡೆದ. ಒಂದು ದಿನ ಮಾವ ಅವನನ್ನು ಕರೆದು, "ಮಗೂ, ನಾಳೆ ಬರುವಾಗ ಅಮ್ಮನ ಚಿನ್ನದ ಸರ ತೆಗೆದುಕೊಂಡು ಬಾ. ಈಗ ಚಿನ್ನದ ಬೆಲೆ ಸ್ವಲ್ಪ ಹೆಚ್ಚಾಗಿರುವುದರಿಂದ ಅದನ್ನು ಮಾರಿ ಬಿಡೋಣ" ಎಂದರು.

ಮನೆಗೆ ಬಂದ ಹುಡುಗ ಅಮ್ಮನ ಹತ್ತಿರ ಚಿನ್ನದ ಸರ ಕೊಡಲು ಹೇಳಿ, ತಾನೇ ಒರೆಹಚ್ಚಿ ನೋಡಿದ. ಅವನಿಗೆ ಅದು ನಕಲಿ ಚಿನ್ನ ಎಂಬ ಸತ್ಯ ತಿಳಿಯಿತು. ಸರವನ್ನು ಹಾಗೆಯೇ ತಾಯಿಗೆ ಕೊಟ್ಟ. ಮರುದಿನ ಮಾವನನ್ನು ಕೇಳಿದ. "ಮಾವ, ಅಮ್ಮನ ಚಿನ್ನದ ಸರ ನಕಲಿ ಎಂಬುದು ನನಗೆ ತಿಳಿಯಿತು. ಆದರೆ ನೀವೇಕೆ ಅದನ್ನು ಮೊದಲೇ ನನಗೆ ತಿಳಿಸಲಿಲ್ಲ?"

ಮಾವ ಹೇಳಿದರು: "ಹೌದು ಮಗೂ, ನನಗದು ನಕಲಿ ಚಿನ್ನವೆಂದು ತಿಳಿಯಿತು. ಆದರೆ ಅದನ್ನು ಹೇಳುವುದಕ್ಕೆ ನನಗೆ ಮನಸ್ಸು ಬರಲಿಲ್ಲ. ಮೊದಲೇ ನೀವು ತುಂಬಾ ಕಷ್ಟದಲ್ಲಿದ್ದೀರಿ. ಸತ್ಯ ಹೇಳಿದ್ದರೆ ಅದನ್ನು ತಾಳಿಕೊಳ್ಳುವುದು ನಿಮಗೂ ಕಷ್ಟವಾಗುತ್ತಿತ್ತು. ಮಾತ್ರವಲ್ಲ, ನೀವು ಕೂಡಾ ನನ್ನನ್ನು ತಪ್ಪು ತಿಳಿದುಕೊಳ್ಳಬಹುದಾಗಿತ್ತು. ಮಾವನೇ ನಮ್ಮ ಕಷ್ಟಕಾಲದಲ್ಲಿ ಮೋಸ ಮಾಡುತ್ತಿದ್ದಾನೆಂದು ಭಾವಿಸಬಹುದಿತ್ತು. ಆದ್ದರಿಂದ ನೀನೇ ಅದನ್ನು ತಿಳಿದುಕೊಳ್ಳಲು ಸಾಧ್ಯವಾಗುವಂತೆ ನಿನಗೆ ಕೆಲಸ ಕಲಿಸುವ ತೀರ್ಮಾನ ಮಾಡಿದೆ. ಮಾತ್ರವಲ್ಲ, ಈ ಕೆಲಸ ಕಲಿಯುವುದರಿಂದ ನಿನಗೂ ಒಂದು ಜೀವನೋಪಾಯ ಸಿಗುತ್ತದೆ ಎಂದು ಹಾಗೆ ಮಾಡಿದೆ."

ಮಾವನ ಮಾತು ಅವನಿಗೆ ಸರಿಯೆನಿಸಿತು.



**ನಾರಾಯಣ ಶೆಟ್ಟಿಗಾರ್,**
**ಬೆಂಗಳೂರು**


AI generated image: No photo credits required

# ಒಂದು ಕನಸು

ಅದೊಂದು ಸುಂದರ ಹಾಗೂ ಸೊಂಪಾದ ಸಂಜೆ. ಆಗಿನ್ನೂ ನನಗೆ ಮದುವೆಯಾಗಿರಲಿಲ್ಲ. ಉಡುಪಿಯ ಮಲ್ಪೆ ಬೀಚ್ನಲ್ಲಿ ನನ್ನೊಬ್ಬ ಸಹೋದ್ಯೋಗಿ ಗೆಳತಿಯ ಜೊತೆ ಪಶ್ಚಿಮ ದಿಕ್ಕಿನಿಂದ ಬೀಸುತ್ತಿದ್ದ ತಂಪು ಗಾಳಿಗೆ ಮೈಯೊಡ್ಡಿ ಕೂತಿದ್ದೆ. ಸುತ್ತ ಮರಳಿನ ರಾಶಿ ಬೇರೆ. ಹಾಸಿಗೆಯಲ್ಲಿ ಹೊರಳಾಡಿದಂತೆ ಮರಳ ರಾಶಿಯಲ್ಲಿ ಕೈ ಚಾಚಿ ಬೆರಳುಗಳಿಂದ ಮರಳನ್ನು ಕೆದಕುತ್ತಾ ಒರಗಿ ಕೂತಿದ್ದಾಗ ಮನಸ್ಸು ಹಗುರಾಗಿ, ಚಿಂತೆ ದೂರಾಗಿ, ಗಾಳಿಯಲ್ಲಿ ಹಾರುತ್ತಿದ್ದೇನೋ ಅನ್ನುವ ಭಾವ. ಪಕ್ಕದ ಗೆಳತಿಯ ಪರಿವೇ ಇಲ್ಲದೆ ಮನಸ್ಸನ್ನು ತೇಲಿ ಬಿಟ್ಟು ನೀಲ ಆಕಾಶದತ್ತ ದಿಟ್ಟಿಸುತ್ತಿದ್ದಂತೆ ಎಲ್ಲಿ ಹಾರಿ ಹೋಗಿತ್ತೋ ನನ್ನ ಮನಸ್ಸು ನನಗೇ ತಿಳಿಯಲಿಲ್ಲ. ಹಂತ ಹಂತವಾಗಿ ಯೋಚನೆಗಳ ತಾಕಲಾಟದ ಜೊತೆ ಹಾರಾಡುತ್ತಿದ್ದೆ. ಏನೇನೋ ಭಾವನೆ. ಏನೇನೋ ಯೋಚನೆ. "ನೀವು ನನ್ನನ್ನು ಬಿಟ್ಟು ಹೋಗುವಿರಾ? ಇಷ್ಟು ದಿನ ನಾನೇನೂ ನಿಮಗೆ ನನ್ನ ಭಾವನೆಗಳ ಬಗ್ಗೆ ತಿಳಿಸಿಯೇ ಇಲ್ಲ. ನೀವೂ ಒಂದು ದಿನಾನೂ ನಿಮ್ಮ ಯೋಚನೆಗಳ ಬಗ್ಗೆ ತಿಳಿಸಿಯೇ ಇಲ್ಲ. ಎಲ್ಲಿಂದ ಆರಂಭಿಸಲಿ, ಹೇಗೆ ವಿವರಿಸಲಿ ಅಂತ ನನಗೆ ಒಂದೂ ಅರಿವಾಗುತ್ತಿಲ್ಲ. ನನಗಾವ ಬೇರೆ ಯೋಚನೆಗಳೂ ಇದುವರೆಗಿರಲಿಲ್ಲ. ಹಾಗಾಗಿ ಹೇಳುವಂಥಾ ವಿಚಾರಗಳೂ ಇರಲಿಲ್ಲ. ಈಗ ಇದ್ದಕ್ಕಿದ್ದಂತೆ ನೀವು ಎದ್ದು ಬಿಟ್ಟು ಟ್ರಾನ್ಸ್ಫರ್ ಆಗಿದೆ, ಹೋಗುತ್ತಿದ್ದೇನೆ ಅಂದರೆ ನಾನು ಹೇಗೆ ನಿಮ್ಮನ್ನು ಬಿಟ್ಟಿರಲಿ? ಯಾರನ್ನೂ ಇದುವರೆಗೆ ಹೆಚ್ಚು ಹಚ್ಚಿಕೊಂಡಿಲ್ಲ. ಯಾರೂ ನನ್ನನ್ನೂ ನೆಚ್ಚಿಕೊಂಡಿಲ್ಲ. ಅಂದಮೇಲೆ ನನ್ನ ಭಾವನೆಗಳನ್ನು, ನನ್ನ ಕಷ್ಟ ಇಷ್ಟಗಳನ್ನು ನಿಮ್ಮನ್ನು ಬಿಟ್ಟರೆ ಇನ್ಯಾರಲ್ಲೂ ಹೆಚ್ಚು ಹಂಚಿಕೊಂಡಿಲ್ಲ. ಅದ್ಯಾಕೋ ನನಗೆ ತಿಳಿಯದೇನೇ ನೀವು ಹತ್ತಿರವಾಗಿ ಬಿಟ್ಟಿರಿ. ದಿನದ ವಿಚಾರಗಳನ್ನು ನಿಮ್ಮಲ್ಲಿ ತಿಳಿಸುವಾಗ ನನಗಾಗುತ್ತಿದ್ದ ಸಂತೋಷ, ಹಗುರವಾಗುತ್ತಿದ್ದ ಮನಸ್ಸು ಇನ್ನು ಸಿಗಬಹುದೇ? ನೀವಾಡುವ ನಿಷ್ಕಪಟ ನುಡಿ, ಸಾಂತ್ವನದ ಮಾತುಗಳನ್ನು ಇನ್ಯಾರಲ್ಲಿ ಕೇಳಲಿ? ಹೋಗಿ ಹೋಗಿ ನನ್ನ ಮನಸ್ಸಿನ ತುಂಬೆಲ್ಲಾ ನೀವೇ ನೆಲೆಸಿ ಬಿಟ್ಟಿರಿ. ಇದೇ ಸತ್ಯ, ಇದೇ ನಿತ್ಯ ಅಂತ ಭಾವಿಸಿ ಬೇರೆ ಕಡೆ ಮನಸನ್ನು ಹರಿ ಬಿಟ್ಟಿರಲಿಲ್ಲ. ಈಗ ನೀವು ಸಿಡಿಸಿರುವ ಮಾತುಗಳು ಭರ ಸಿಡಿಲಿನಂತೆ ಭಾಸವಾಗುತ್ತಿದೆ ಎಂದು ಕರ್ಚೀಫ಼್ನಿಂದ ಕಣ್ಣೊರಸುತ್ತಿದ್ದಾಗ ಅರೇ ಈ ಮಾತುಗಳನ್ನು ಇವಳು ಸಿಡಿಸುತ್ತಿದ್ದಾಳೆಯೇ ಅಂತ ಅನಿಸುವಂತಾಯಿತು. ನಾವಿಬ್ಬರೂ ಅಕ್ಕ ಪಕ್ಕದ ಮನೆಯವರು, ಗೆಳೆಯರು ಅನ್ನುವುದು ಬಿಟ್ಟರೆ ನನ್ನ ಮನಸ್ಸಿನಲ್ಲಿ ಬೇರೇನೂ ಇದ್ದಿಲ್ಲ. ನನ್ನ ಉದ್ಯೋಗದ ನಿಮಿತ್ತ ನಾನು ಬೇರೆಡೆಗೆ ಹೋಗುತ್ತಿದ್ದೇನೆ ಅನ್ನುವ ಹೊತ್ತಿನಲ್ಲಿ ಏಕಾಏಕಿ ಬಂದ ಈಕೆಯ ಈ ಮಾತುಗಳಿಂದ ನಾನು ದಿಗ್ಭ್ರಾಂತನಾಗಿ ಬಿಟ್ಟೆ. ಇಬ್ಬರೂ ಒಳ್ಳೆಯ ಗೆಳೆಯರು ಅನ್ನುವುದು ಬಿಟ್ಟರೆ ಬೇರೆ ಯಾವ ಯೋಚನೆಗೂ ಅವಕಾಶವೇ ಇರಲಿಲ್ಲ. ಆದರೆ ಇವಳು ತನ್ನ ಹೃದಯದಲ್ಲಿ ಹುದುಗಿಸಿದ್ದ ಭಾವನೆಗಳನ್ನು ಕೇಳಿ ಒಂದು ಕ್ಷಣ ಏನು ಮಾಡಬೇಕೆಂದೇ ತೋಚಲಿಲ್ಲ.

ಅಷ್ಟೊತ್ತಿಗಾಗಲೇ, "ಏನ್ರೀ, ಇನ್ನೂ ಎಷ್ಟು ಹೊತ್ತು" ಅಂತ ಸೌಂಡ್. "ಹಾಸಿಗೆಯಲ್ಲೇ ಬಿದ್ದು ಹೊರಳಾಡುತ್ತೀರಾ?"

ಹೌದು, ನನ್ನ ಮಡದಿಯ ಧ್ವನಿ! ದಢಕ್ಕನೆ ಎಚ್ಚರಗೊಂಡೆ. ಕಣ್ಣು ಬಿಡಿಸಿ ನೋಡಿದೆ. ಚೆನ್ನಾಗಿ ಬೆಳಗಾಗಿತ್ತು.



**ಮಾಧವ ಶೆಟ್ಟಿಗಾರ್, ಯು**
**ವಿಜಯನಗರ, ಬೆಂಗಳೂರು**

# ಗೋತ್ರ

ನಮ್ಮ ಶೆಟ್ಟಿಗಾರ್ ಬಂಧುಗಳಿಗೆ ಮನೆಯಲ್ಲಿ / ದೇವಸ್ಥಾನಗಳಲ್ಲಿ ಪೂಜೆ, ಪುರಸ್ಕಾರ, ಅರ್ಚನೆ ಮಾಡಿಸುವಾಗ ಭಟ್ರು ನಮ್ಮ ಗೋತ್ರ ಕೇಳುವುದು ಸಾಮಾನ್ಯ. ಆದರೆ ನಮ್ಮಲ್ಲಿ ನಮ್ಮ ಗೋತ್ರದ ಬಗ್ಗೆ ಸಾಕಷ್ಟು ಜನರಿಗೆ ಅರಿವಿಲ್ಲ. ನಮ್ಮಲ್ಲಿ ಏಳು "ಬರಿ"ಗಳಿದ್ದು ಈ ಏಳೂ ಬರಿಗೂ ಒಂದೊಂದು "ಗೋತ್ರ" ಇದೆ. ಈ ಏಳೂ ಗೋತ್ರಗಳಿಗೆ ಸಂಬಂಧ ಪಟ್ಟಂತೆ ಏಳು ಅಂದರೆ ಸಪ್ತರ್ಷಿಗಳ ಹೆಸರಿದೆ.

1. ಕರ್ತನ್ ಕೋಲು ಬರಿ..............ಕಶ್ಯಪ ಗೋತ್ರ
2. ಕೌಡೆಂಜಿ ಬರಿ............................ವಿಶ್ವಾಮಿತ್ರ ಗೋತ್ರ
3. ಚೋರಡ ಬರಿ...........................ಭಾರ್ಗವ ಗೋತ್ರ
4. ಸಾಮೇಡಬರಿ...........................ಜಮದಗ್ನಿ ಗೋತ್ರ
5. ಉಪ್ಪುಂದ ಬರಿ........................ವಶಿಷ್ಠ ಗೋತ್ರ
6. ಕಡಮನಕೊಲು ಬರಿ ...............ಭಾರಧ್ವಾಜ ಗೋತ್ರ
7. ಮೇಚಡ ಬರಿ...........................ಅಂಗೀರಸ ಗೋತ್ರ



!!ಶುಭಮಸ್ತು!!

ಸಂಗ್ರಹ
**ಮಿಜಾರ್ ರಾಮಚಂದ್ರ**
**ಶೆಟ್ಟಿಗಾರ್, ಬೆಂಗಳೂರು**

# ಎಲ್ಲಾದರೂ ಇರು, ಎಂತಾದರು ಇರು, ಎಂದೆಂದಿಗೂ ನೀ....

*"ಯು ಇಂಡಿಯನ್ಸ್ ವೋಟೆಡ್ ಫಾರ್ ಟ್ರಂಪ್. ಯು ಡಿಂಟ್ ಸಪೋರ್ಟ್ ಕಮಲಾ ಹ್ಯಾರಿಸ್. ಸಿ ವಾಟ್ ಹೀ ಹ್ಯಾಸ್ ಡನ್ ನೌ. ಬಿಕಾಸ್ ಆಫ್ ಯು, ವೀ ಆರ್ ಪೇಯಿಂಗ್ ದ ಪ್ರೈಸ್."*

ವಾಷಿಂಗ್ಟನ್ ಡಿ.ಸಿ ಯಲ್ಲಿ ಅನೇಕ ಮ್ಯೂಸಿಯಂಗಳಿವೆ. ಆದರೆ, ಇವುಗಳಲ್ಲಿ ಅತ್ಯಂತ ವಿಶಿಷ್ಟವಾದ ಮ್ಯೂಸಿಯಂ ಎಂದರೆ Smithsonian National Museum of Natural History. ಇದರೊಳಗಿನ ಒಂದು ವಿಭಾಗದಲ್ಲಿ ಚಾರ್ಲ್ಸ್ ಡಾರ್ವಿನ್ ಸಿದ್ಧಾಂತಕ್ಕೆ ಆಧಾರವಾದ ಪುರಾವೆಗಳು ಇವೆ.—ಮಂಗನಿಂದ ಮಾನವನಾಗಿ ಹೇಗೆ ವಿಕಾಸವಾಯಿತು ಎಂಬುದರ ಕುರಿತು. ಔಟ್ ಆಫ್ ಆಫ್ರಿಕಾ" ಈ ಸಿದ್ಧಾಂತವು ಹೇಳುವುದೇನೆಂದರೆ, ಆಧುನಿಕ ಮಾನವ (Homosapiens) ಸುಮಾರು 200,000 ರಿಂದ 300,000 ವರ್ಷಗಳ ಹಿಂದೆ ಆಫ್ರಿಕಾದಲ್ಲಿ ವಿಕಾಸಗೊಂಡು ಮತ್ತು ಸುಮಾರು 60,000 - 80,000 ವರ್ಷಗಳ ಹಿಂದೆ ಇತರ ಖಂಡಗಳಿಗೆ ವಲಸೆ ಹೋದನು. ವಲಸೆ ಹೋಗಿದ್ದ ಮಾನವರು ವಿವಿಧ ಪರಿಸರಗಳಿಗೆ ಹೊಂದಿಕೊಳ್ಳುತ್ತಾ, ಪ್ರಾದೇಶಿಕ ಜನಸಂಖ್ಯೆ ಮತ್ತು ಸಂಸ್ಕೃತಿಗಳನ್ನು ರೂಪಿಸಿದರು.



ಸಾವಿರಾರು ವರ್ಷಗಳಿಂದ ಮಾನವನು ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹೊಸ ಆವಿಷ್ಕಾರಗಳನ್ನು ಮಾಡುತ್ತಾ ಬಂದಿದ್ದಾನೆ. ಈ ಸಂಗ್ರಹಾಲಯದಲ್ಲಿ ಈ ಎಲ್ಲಾ ಬೆಳವಣಿಗೆಯ ಪುರಾವೆಗಳು, ವಿವರಗಳು, ಹಾಗೂ ಆಧಾರಗಳೊಂದಿಗೆ ಪ್ರದರ್ಶಿತಗೊಂಡಿವೆ. ಇದನ್ನು ನೋಡಿದಾಗವಿಜ್ಞಾನದ ದೃಷ್ಟಿಯಿಂದ ಮಾನವನ ಬೆಳವಣಿಗೆ ಎಷ್ಟು ಅದ್ಭುತವಾಗಿದೆ ಎಂಬುದು ಮನಸ್ಸಿಗೆ ಹೊಳೆಯಿತು. ನಾನು ಇದನ್ನೆಲ್ಲಾ ಕ್ಯಾಮೆರಾದಲ್ಲಿ ಸೆರೆಹಿಡಿಯುತ್ತಾ ಇದ್ದೆ. ಆದರೆ, ಮನದಲ್ಲಿ "ದೇವರು ಮತ್ತು ದೆವ್ವಗಳು ಎಲ್ಲಿಂದ ಬಂದವು?" ಎಂದು ಪ್ರಶ್ನೆ ಮೂಡುತ್ತಿದ್ದಂತೆ ಸಂಗ್ರಹಾಲಯದ ಬೇರೆ ವಿಭಾಗಗಳಿಗೆ ಹೆಜ್ಜೆ ಇಟ್ಟೆ.

ಇಲ್ಲಿ ಇನ್ನೂ ಅನೇಕ ವಿಭಾಗಗಳಿವೆ—ಚಿಟ್ಟೆಗಳು, ಪಳೆಯುಳಿಕೆಗಳು (ಡೈನೋಸಾರ್ಸ್), ಸಾಗರ ಪ್ರಪಂಚ ಇತ್ಯಾದಿ. ಇದೆಲ್ಲವನ್ನು ನೋಡಿದಾಗ ಅನಿಸಿದ್ದು ನಾವು ಎಷ್ಟು ತಿಳಿದುಕೊಂಡು ಪಂಡಿತನಾದರೂ ಇನ್ನು ಕೋಟಿಗಟ್ಟಲೆ ಬಾಕಿ ಇರುವ ವಿಷಯಗಳು ಇದ್ದೆ ಇರುತ್ತದೆ ಎಂದು. ಬೆಂಗಳೂರಿನ ಐ ಟಿ ಕಂಪೆನಿಯಲ್ಲಿ ಕಿಸಿದು ಗುಡ್ಡೆ ಹಾಕಿದ್ದು ಇದರ ಮುಂದೆ ಏನು ಇಲ್ಲ ಎಂದು ಮನದಲ್ಲಿ ನನ್ನಷ್ಟಕ್ಕೆ ನಾನು ನನ್ನನ್ನೇ ಹೀಯಾಳಿಸಿ ಮಾತಾಡುತ್ತಿದ್ದೆ.

ಸಂಗ್ರಹಾಲಯದಿಂದ ಹೊರಕ್ಕೆ ಬಂದೆ. ಹೊರಗಿನ ತಾಪಮಾನ -1 ಡಿಗ್ರಿ. ಅದರಲ್ಲೂ ಜೋರಾದ ಚಳಿ ಗಾಳಿ. ನನ್ನ ಕತ್ತಿನಲ್ಲಿ ನೇತಾಡುತ್ತಿದ್ದ ಕ್ಯಾಮೆರಾ ನಿಂತಲ್ಲೇ ಬ್ಯಾಗಿನಲ್ಲಿ ಇಡಲು ಆಗಲಿಲ್ಲ. ಹೀಗಾಗಿ, ಫುಟ್ಪಾತ್‌ನ 10 ಅಡಿ ಮುಂದೆ ಇದ್ದ ಒಂದು ಕುರ್ಚಿಯಲ್ಲಿ ಕುಳಿತು, ಕ್ಯಾಮೆರಾವನ್ನು ಬ್ಯಾಗಿನಲ್ಲಿ ಇಟ್ಟು, ಹಾಡು ಕೇಳುತ್ತ ನಡೆದುಕೊಂಡು ಹೋಟೆಲ್ ಗೆ ತಲುಪಲು ನಿರ್ಧರಿಸಿದೆ. "ಎಲ್ಲಾದರೂ ಇರು.." ಹಾಡನ್ನು ಸ್ಪೋಟಿಫ್ಯ್ ನಲ್ಲಿ ಒತ್ತಿದೆ. ಬ್ಯಾಗಲ್ಲಿದ್ದ ಇಯರ್ ಪಾಡ್ ಅನ್ನು ತೆಗೆದು ಬಲ ಕಿವಿಯ ಇಯರ್ ಪಾಡ್ ಅನ್ನು ಧರಿಸಿದಾಗ ಹಾಡು ಶುರುವಾಯಿತು "... ಎಂತಾದರು ಇರು, ಎಂದೆಂದಿಗೂ ನೀ ... ". ಎಡಗಿವಿಯ ಇಯರ್ ಪಾಡ್ ಕಿವಿಗೆ ಹಾಕಿಕೊಳ್ಳಬೇಕಾದರೆ ನನ್ನ ಹಿಂದಿನಿಂದ ಒಬ್ಬ ಆಫ್ರಿಕನ್ ಅಮೆರಿಕನ್ ನನ್ನನ್ನೇ ಗುರಾಯಿಸಿಕೊಂಡು ಹೋಗುತ್ತಿದ್ದಂತೆ ಜೋರಾಗಿ ಕಿರುಚುತ್ತಾ "ಯು ಇಂಡಿಯನ್ಸ್ ವೋಟೆಡ್ ಫಾರ್ ಟ್ರಂಪ್. ಯು ಡಿಂಟ್ ಸಪೋರ್ಟ್ ಕಮಲಾ ಹ್ಯಾರಿಸ್. ಸೀ ವಾಟ್ ಹೀ ಹ್ಯಾಸ್ ಡನ್ ನೌ. ಬಿಕಾಸ್ ಆಫ್ ಯು, ವೀ ಆರ್ ಪೇಯಿಂಗ್ ದ ಪ್ರೈಸ್!"

"ಯಾವ ಹಾಡೂ ಬೇಡ ಏನೂ ಬೇಡ" ಎಂದು ಮನಸಿನ್ನಲ್ಲೇ ಬೈದುಕೊಂಡು ಅವಸರಾವಸರದಲ್ಲಿ ಇಯರ್ ಪಾಡ್ಸ್ ಅನ್ನು ಒಳಗೆ ಇಟ್ಟು ಎದ್ದು ನಡೆಯಲಾರಂಭಿಸಿದೆ. ಈ ವ್ಯಕ್ತಿ ಶೂಟ್ ಮಾಡಿದರೆ ಏನಪ್ಪಾ ಗತಿ ಎಂದು ಒಂದು ಕಡೆ ಭಯ... ಇನ್ನೊಂದು ಕಡೆ "ನಾನೇನು ಇಲ್ಲಿನ ಸಿಟಿಝುನ್ ಆ? ವೋಟ್ ಹಾಕಕ್ಕೆ" ಎಂದು ಮನಸ್ಸಿನಲ್ಲೇ ಗೊಣಗುತ್ತಿದ್ದೆ.

ಈ ಘಟನೆಯಿಂದ ಮನನೊಂದಿತು. ಮುಂದೆ ಹೋಗುತ್ತಿದಂತೆ ಬಹಳಷ್ಟು ವಿಚಾರಗಳು ಮನಸ್ಸಿಗೆ ಬಂದವು. ಬೇಸರವು ಆಯಿತು, ಏಕೆಂದರೆ, ಮನುಷ್ಯನಿಗೆ ಏನು ಬೇಕು ಎಷ್ಟು ಬೇಕು ಎಂಬುದೇ ಗೊತ್ತಿಲ್ಲ. ಕುಡಿಯಲು ನೀರು, ತಿನ್ನಲು ಆಹಾರ, ಉಡುವ ಬಟ್ಟೆ, ಮತ್ತು ನೆಮ್ಮದಿಯ ಸಮಾಜ. ಆದರೆ, ಇವೆಲ್ಲವನ್ನು ಬಿಟ್ಟು Money, Power ಮತ್ತು Fame ಹಿಂದೆ ಓಡುವ ಮಾನವನು ಈ ಸಮಾಜಕ್ಕೆ ಕೊಟ್ಟ ಕೊಡುಗೆಯಿಂದ ಏನೇನೆಲ್ಲ ಆಗುತ್ತೆ ಎಂಬುವುದಕ್ಕೆ ಇದೂ ಒಂದು ಉದಾಹರಣೆ ಇರಬಹುದೆಂದು ಭಾವಿಸಿದೆ. ಮಾನವನಿಗೆ ಬುದ್ಧಿ ಬರಬೇಕಾದರೆ ಮತ್ತೆ ಮಂಗನಾಗಲೇ ಬೇಕು ಎಂದೆನಿಸಿತು.

ಮಾನವನು ಚಕ್ರ ಸೃಷ್ಟಿ ಮಾಡಿದ. ಆದರೆ ಅದೇ ಚಕ್ರದಲ್ಲಿ ಇಡೀ ಸೃಷ್ಟಿಯೇ ಇದೆ ಎಂದು ಮರೆತು, ಇಂದಿಗೂ ಸೈಕಲ್ ಹೊಡೀತಾನೆ ಇದ್ದಾನೆ.



**ಯಶಸ್ವಿ ಜೆ, ಜ್ಞಾನಭಾರತಿ ಬೆಂಗಳೂರು**


Photo Credits: Temple Connect X

# ಕಾಪು ಮಾರಿಯಮ್ಮ

ಕಾಪುವಿಗೆ ಬರುತಿರುವೆ ಕಾಪಾಡು ನೀ ತಾಯೆ
ಕಾಪುವಳಿ ಕಂಗೊಳಿಪ ಮಾರಿಯಮ್ಮ|
ಪಾಪಗಳ ಕೂಪದೊಳು ಲೋಪಗಳ ತಾಪದೊಳು
ವೇಪನವು ನಾ ಬಲ್ಲೆ ಮಾರಿಯಮ್ಮ||

ಅರಳಿರುವ ಕುಸುಮಗಳ ಒಳ ಹೊಕ್ಕು ಹೊರ ಬಂದೆ
ಚರಣಕೆರಗಲು ಗುಡಿಗೆ ಹೊರಡುತಿಹವು |
ಕರೆದೆನ್ನ ಹೇಳಿಹವು ಅಮ್ಮನಿರೆ ಜೊತೆಯಲ್ಲಿ
ಬರದೆಂದು ಸಂಕಟವು ಅರಿತಿರುವೆವು ||

ಎಲ್ಲರೆದೆಯಲಿ ನೆಲೆಸಿ ಜಿಹ್ವೆಯನು ನೀ ನಲಿಸಿ
ತಲ್ಲಣವ ಸರಿಸಿರುವೆ ಮಾರಿಯಮ್ಮ|
ಅಲ್ಲಿರುವೆ ನೀನಮ್ಮ ಇಲ್ಲಿರುವೆ ನೀನಮ್ಮ
ಎಲ್ಲೆಡೆಯು ನೀನಮ್ಮ ಮಾರಿಯಮ್ಮ||

ತರತಮವ ತೋರದೇ ಬರಸೆಳೆದು ತಬ್ಬಿರುವೆ
ಅರಿವೆನಗೆ ನಿನ್ನಿಂದ ಮಾರಿಯಮ್ಮ|
ಕರೆಸಿರುವೆ ನೀನಮ್ಮ ಹರಸಿರುವೆ ನೀನಮ್ಮ
ಹರುಷದೊಳು ನಾನಿರುವೆ ಮಾರಿಯಮ್ಮ||

ಸೊಗವೆಂಬ ಸಾಗರವ ಜಗದಗಲ ಹರಿಸಿರುವೆ
ನಗಿಸಿರುವೆ ಮೆರೆಸಿರುವೆ ಮಾರಿಯಮ್ಮ|
ಬಗೆ ಬಗೆಯ ಸಂಭ್ರಮವು ಸಿಗುವಾಗ ಭಯವೆಲ್ಲಿ
ಚಿಗುರೆಲೆಗೆ ಆಸರೆಯು ಮಾರಿಯಮ್ಮ||



**ಶೋಭಾ ಹರಿಪ್ರಸಾದ ಶೆಟ್ಟಿಗಾರ**
**ಉಡುಪಿ**


Photo Credit: Jagadishram Shettigar

# ಎಲ್ಲಾ ಮಣ್ಣು

ಜೇಡಿ ಮಣ್ಣನ್ನು ಹದ ಮಾಡಿ
ಗೊಂಬೆ ಮಾಡುವ ಹಂಬಲ
ಚೆಲುವೆಗೆ ಸೋತಿರಲು ಮನ
ಹೇಳಿ ತುಂಬಿತೆನಗೆ ಬೆಂಬಲ.

ಕಿವಿ, ಬಾಯಿ, ಮೂಗು ಕತ್ತು.
ಓಲೆ, ಬಳೆ, ತಿಲಕ ನತ್ತು.
ಹುಬ್ಬು ತೀಡಿ, ತೆರೆಸಿ ಬಿಟ್ಟೇ ಕಣ್ಣು.
ಅಯ್ಯೋ..? ಮರೆತೆ, ಅವಳ ಬೆನ್ನು.

ಕೊರಳ ತುಂಬಾ ತೊಡಿಸಿ ಸರ.
ಜೀವ ಕಳೆಯು ತರುವ ಅವಸರ.
ಬ್ರಹ್ಮನಂತೆ ನಿನ್ನ ವರಿಸಿ
ನನಗೆ ಆಗು ನೀನು ಅರಸಿ.

ಬೇಡ ಮರುಳೇ? ಬಿಡು.
ಅಲ್ಲ ನಾನು ಹೆಣ್ಣು,
ಮೆತ್ತುವಾಗ ಜಾಗ್ರತೆ.
ನನ್ನಂತೆ ಆಗುವೆ ನೀ ಮಣ್ಣು.



**ಜಗದೀಶರಾಂ ಶೆಟ್ಟಿಗಾರ್ ಜಪ್ತಿ**
**ಕುಂದಾಪುರ**

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.

- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.

- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.

- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**
**ವಾಟ್ಸಪ್ ನಂ. 9845660131**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**